# ಯೆಹೋವ ದೇವರ ಇಷ್ಟವನ್ನು
## ಯಾರು ಮಾಡುತ್ತಿದ್ದಾರೆ?



ಯೆಹೋವನ ಸಾಕ್ಷಿಗಳು

## ನಮ್ಮ ಪರಿಚಯ

ಅಧ್ಯಾಯ 1ರಿಂದ 4ರಲ್ಲಿ . . .

ಯೆಹೋವನ ಸಾಕ್ಷಿಗಳಾದ ನಾವು 240 ರಾಷ್ಟ್ರಗಳಲ್ಲಿ ಜಾತಿ ಭಾಷೆ ಎಂಬ ಭೇದಭಾವವಿಲ್ಲದೆ ಒಗ್ಗಟ್ಟಾಗಿದ್ದೇವೆ. ನಮ್ಮ ಈ ಒಗ್ಗಟ್ಟಿಗೆ ಕಾರಣವೇನು? ನಾವು ಯಾವ ರೀತಿಯ ಜನರು? ಈ ಅಧ್ಯಾಯಗಳಲ್ಲಿ ಉತ್ತರವಿದೆ.



## ನಮ್ಮ ಕಾರ್ಯಚಟುವಟಿಕೆ

ಅಧ್ಯಾಯ 5ರಿಂದ 14ರಲ್ಲಿ . . .

ಜನರಿಗೆ ದೇವರ ಸರ್ಕಾರದ ಬಗ್ಗೆ ಸುವಾರ್ತೆ ತಿಳಿಸಲು ನಾವು ಹೆಚ್ಚು ಆದ್ಯತೆ ನೀಡುತ್ತೇವೆ. ಆರಾಧನೆಗಾಗಿ ನಾವು 'ರಾಜ್ಯ ಸಭಾಗೃಹ'ಗಳಲ್ಲಿ ಸಭೆಸೇರುತ್ತೇವೆ. ಅಲ್ಲಿ ಬೈಬಲ್ ವಿಷಯಗಳನ್ನು ಚರ್ಚಿಸಲಾಗುತ್ತದೆ. ನಮ್ಮ ಸಭಾಕೂಟಗಳು ಹೇಗೆ ನಡೆಯುತ್ತವೆ? ಯಾರೆಲ್ಲ ಹಾಜರಾಗಬಹುದು?
ಈ ಅಧ್ಯಾಯಗಳು ಉತ್ತರ ನೀಡುತ್ತವೆ.



## ನಮ್ಮ ಸಂಘಟನೆ

ಅಧ್ಯಾಯ 15ರಿಂದ 28ರಲ್ಲಿ . . .

ನಮ್ಮದು ಲಾಭೋದ್ದೇಶವಿಲ್ಲದ ಅಂತಾರಾಷ್ಟ್ರೀಯ ಧಾರ್ಮಿಕ ಸಂಘಟನೆ. ಈ ಸಂಘಟನೆಯಲ್ಲಿ ಇರುವವರೆಲ್ಲರೂ ದೇವರ ಸೇವೆ ಮಾಡಲು ಸ್ವಯಂಪ್ರೇರಿತರಾಗಿ ಬಂದವರು. ಈ ನಮ್ಮ ಸಂಘಟನೆ ರೂಪುಗೊಂಡಿರುವುದು ಹೇಗೆ? ಕಾರ್ಯನಿರ್ವಹಣೆ ಹೇಗಿದೆ? ಹಣಕಾಸು ಎಲ್ಲಿಂದ ಬರುತ್ತದೆ? ನಮ್ಮ ಸಂಘಟನೆ ಇಂದು ನಿಜಕ್ಕೂ ಯೆಹೋವ ದೇವರ ಇಷ್ಟವನ್ನು ಮಾಡುತ್ತಿದೆಯಾ? ಉತ್ತರ ಈ ಅಧ್ಯಾಯಗಳಲ್ಲಿದೆ.



**ಈ ಪ್ರಕಾಶನವು ಮಾರಾಟಕ್ಕಾಗಿ ಇಲ್ಲ. ಇದು ಸ್ವಯಂ ಪ್ರೇರಿತ ದಾನಗಳಿಂದ ಬೆಂಬಲಿಸಲ್ಪಡುವ ಲೋಕವ್ಯಾಪಕ ಬೈಬಲ್ ಶಿಕ್ಷಣಕಾರ್ಯದ ಭಾಗವಾಗಿ ಒದಗಿಸಲ್ಪಡುತ್ತದೆ.**
**ಕಾಣಿಕೆ ನೀಡಲು www.jw.orgಗೆ ಭೇಟಿ ನೀಡಿ.**
ಹೀಬ್ರು ಶಾಸ್ತ್ರಗಳಿಂದ ಉಲ್ಲೇಖಿಸಲಾಗಿರುವ ವಚನಗಳು 'ಸತ್ಯವೇದವು' ಬೈಬಲಿನಿಂದಾಗಿವೆ ಮತ್ತು ಗ್ರೀಕ್ ಶಾಸ್ತ್ರಗಳಿಂದ ಉಲ್ಲೇಖಿಸಲಾಗಿರುವ ವಚನಗಳು *ಕ್ರೈಸ್ತ ಗ್ರೀಕ್ ಶಾಸ್ತ್ರ ಗ್ರಂಥದ ನೂತನ ಲೋಕ ಭಾಷಾಂತರ* ಬೈಬಲಿನಿಂದಾಗಿವೆ.
*ಯೆಹೋವ ದೇವರ ಇಷ್ಟವನ್ನು ಯಾರು ಮಾಡುತ್ತಿದ್ದಾರೆ?*
*Who Are Doing Jehovah's Will Today?*
ನವೆಂಬರ್ 2016ರ ಮುದ್ರಣ
Kannada ( *jl*-KA)
© 2012, 2014
WATCH TOWER BIBLE AND TRACT SOCIETY OF PENNSYLVANIA
**ಪ್ರಕಾಶಕರು**
Watchtower Bible and Tract Society of New York, Inc.
Wallkill, New York, U.S.A.
Made in Japan
ಜಪಾನಿನಲ್ಲಿ ತಯಾರಿಸಲಾಗಿದೆ

### ಈ ಕಿರುಹೊತ್ತಗೆಯ ಬಳಕೆ ಬಗ್ಗೆ . . .

ಪ್ರತಿವಾರ ಸ್ವಲ್ಪ ಸಮಯ ಬದಿಗಿರಿಸಿ ಈ ಕಿರುಹೊತ್ತಗೆಯನ್ನು ಓದಿ. ಪ್ರತಿ ಅಧ್ಯಾಯದ ಕೊನೆಯಲ್ಲಿರುವ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯಲು ಪ್ರಯತ್ನಿಸಿ. "ಇನ್ನಷ್ಟು ತಿಳಿಯಲು . . ." ಎಂಬ ಶೀರ್ಷಿಕೆಯ ಕೆಳಗೆ ಕೊಡಲಾದ ಸಲಹೆಯನ್ನು ಪಾಲಿಸಿ ನಮ್ಮ ಬಗ್ಗೆ ತಿಳಿದುಕೊಳ್ಳಿ. ಜೊತೆಗೆ ನಮ್ಮ ಹಾಗೂ ನಮ್ಮ ಸಂಘಟನೆಯ ಕಾರ್ಯವೈಖರಿಯ ಬಗ್ಗೆ ಮಾಹಿತಿ ಪಡೆದುಕೊಳ್ಳಿ.







# ದೇವರ ಇಷ್ಟ ಏನು ಗೊತ್ತೆ?

## ಮನುಷ್ಯರು ಭೂಮಿಯಲ್ಲಿ ಸುಖನೆಮ್ಮದಿಯಿಂದ ಸಾವಿಲ್ಲದೆ ಬದುಕಬೇಕು ಎನ್ನುವುದು ದೇವರ ಇಷ್ಟ.

'ಇದು ನಿಜವಾಗ್ಲೂ ಸಾಧ್ಯನಾ' ಎಂದು ನೀವು ಹುಬ್ಬೇರಿಸಬಹುದು. ಸಾಧ್ಯ ಎನ್ನುತ್ತದೆ ಬೈಬಲ್. ದೇವರ ಸರ್ಕಾರ ಬಂದಾಗ ಅಂಥ ಬದುಕು ನಮಗೆ ಸಿಗುತ್ತದೆ. ತನ್ನ ಆ ಸರ್ಕಾರದ ಬಗ್ಗೆ ಹಾಗೂ ಅದು ಏನು ಮಾಡುತ್ತದೆ ಎನ್ನುವುದರ ಬಗ್ಗೆ ಮಾನವರೆಲ್ಲರೂ ತಿಳಿದುಕೊಳ್ಳಬೇಕು ಎನ್ನುವುದು ದೇವರ ಇಚ್ಛೆ.—ಕೀರ್ತನೆ 37:11, 29; ಯೆಶಾಯ 9:7.

## ನಾವು ಸಂತೋಷದಿಂದ ಬದುಕಬೇಕು ಎನ್ನುವುದು ದೇವರ ಇಷ್ಟ.

ಮಕ್ಕಳು ಸಂತೋಷವಾಗಿ ಇರಬೇಕೆಂದು ಬಯಸುವ ತಂದೆಯಂತೆಯೇ ನಮ್ಮ ಸೃಷ್ಟಿಕರ್ತ ದೇವರು ಸಹ ನಾವು ಸದಾಕಾಲ ಸಂತೋಷವಾಗಿ ಇರಬೇಕೆಂದು ಇಷ್ಟಪಡುತ್ತಾನೆ. (ಯೆಶಾಯ 48:17, 18) ಹಾಗಾಗಿಯೇ 'ನನ್ನ ಚಿತ್ತವನ್ನು ಮಾಡುವವನು ಎಂದೆಂದಿಗೂ ಇರುವನು' ಎಂದು ಆತನು ಮಾತುಕೊಟ್ಟಿದ್ದಾನೆ.—1 ಯೋಹಾನ 2:17.

## ತಾನು ತೋರಿಸುವ ಮಾರ್ಗದಲ್ಲಿ ಮನುಷ್ಯರು ನಡೆಯಬೇಕು ಎನ್ನುವುದು ದೇವರ ಇಷ್ಟ.

ನಾವು ನಡೆಯಬೇಕಾದ ಮಾರ್ಗವನ್ನು ದೇವರು "ಬೋಧನೆ ಮಾಡುವನು" ಎಂದು ಬೈಬಲ್ ತಿಳಿಸುತ್ತದೆ. (ಯೆಶಾಯ 2:2, 3) ತನ್ನ ಇಷ್ಟವನ್ನು ಭೂಮಿಯ ಎಲ್ಲಾ ಜನರಿಗೆ ತಿಳಿಸುವ ಉದ್ದೇಶದಿಂದ ದೇವರು "ತನ್ನ ಹೆಸರಿಗಾಗಿ" ಜನರ ಗುಂಪೊಂದನ್ನು ಆರಿಸಿಕೊಂಡಿದ್ದಾನೆ.—ಅಪೊಸ್ತಲರ ಕಾರ್ಯಗಳು 15:14.

## ಮನುಷ್ಯರೆಲ್ಲರೂ ತನ್ನನ್ನು ಆರಾಧಿಸುತ್ತಾ ಒಗ್ಗಟ್ಟಾಗಿರಬೇಕು ಎನ್ನುವುದು ದೇವರ ಇಷ್ಟ.

ಯೆಹೋವ ದೇವರನ್ನು ಆರಾಧಿಸುವಾಗ ಜನರಲ್ಲಿ ಪ್ರೀತಿ ಐಕ್ಯತೆ ಹೆಚ್ಚುತ್ತದೆ. ಅವರು ಭೇದಭಾವ ಮರೆತು ಒಂದಾಗುತ್ತಾರೆ. (ಯೋಹಾನ 13:35) ದೇವರನ್ನು ಐಕ್ಯಭಾವದಿಂದ ಆರಾಧಿಸುವುದು ಹೇಗೆಂದು ಯಾರು ತಿಳಿಸಿಕೊಡುತ್ತಾರೆ? ಉತ್ತರ ಈ ಕಿರುಹೊತ್ತಗೆಯಲ್ಲಿದೆ.

## ಇನ್ನಷ್ಟು ತಿಳಿಯಲು . . .

**ಬೈಬಲ್ ಕಲಿಕೆಯ ನಮ್ಮ ಕಾರ್ಯಕ್ರಮ.** ಯೆಹೋವನ ಸಾಕ್ಷಿಗಳ ಬೈಬಲ್ ಕಲಿಕೆಯ ಉಚಿತ ಕಾರ್ಯಕ್ರಮದಿಂದ ಪ್ರಯೋಜನ ಪಡೆಯುತ್ತಿದ್ದೀರಾ? ಇಲ್ಲವಾದರೆ, ಬೈಬಲ್ ಬಗ್ಗೆ ಕಲಿಯಲು ಏಕೆ ಯೋಚಿಸಬಾರದು. ದೇವರೊಡನೆ ಆಪ್ತರಾಗಲು ಇದು ಉತ್ತಮ ವಿಧವೆಂದು ನೀವು ಕಂಡುಕೊಳ್ಳುವಿರಿ.

**ಉಚಿತ ಸಾಹಿತ್ಯ ಪಡೆದುಕೊಳ್ಳಿ.** ಬೈಬಲನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಪ್ರಕಾಶನಗಳು ಉಚಿತವಾಗಿ ದೊರೆಯುತ್ತವೆ. ನಿಮ್ಮ ಭಾಷೆಯಲ್ಲೇ ಪುಸ್ತಕಗಳನ್ನು ಪಡೆಯಲು ಸ್ಥಳೀಯ ಯೆಹೋವನ ಸಾಕ್ಷಿಗಳ ಸಭೆಗೆ ಹೋಗಿ ಇಲ್ಲವೆ ಒಬ್ಬ ಯೆಹೋವನ ಸಾಕ್ಷಿಯನ್ನು ಭೇಟಿಯಾಗಿ.

**ನಮ್ಮ ಅಂತರ್ಜಾಲ ವಿಳಾಸ.** ನಮ್ಮ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನಮ್ಮ ಅಧಿಕೃತ ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು. ಅಲ್ಲಿ ನೀವು ಬೈಬಲನ್ನೂ ಓದಬಹುದು. 750ಕ್ಕೂ ಹೆಚ್ಚು ಭಾಷೆಗಳ ಪ್ರಕಾಶನಗಳು ಅದರಲ್ಲಿವೆ. ಅವುಗಳನ್ನು ಓದಬಹುದು ಹಾಗೂ ಮುದ್ರಿಸಬಹುದು.

**www.jw.org**







1

# ಯೆಹೋವನ ಸಾಕ್ಷಿಗಳ ಪರಿಚಯ ನಿಮಗಿದೆಯೇ?


ಡೆನ್ಮಾರ್ಕ್


ತೈವಾನ್


ವೆನಿಜ್ವೇಲ


ಭಾರತ

ನಿಮಗೆ ಯೆಹೋವನ ಸಾಕ್ಷಿಗಳ ಪರಿಚಯ ಇದೆಯೇ? ಅವರು ನಿಮ್ಮ ಮನೆಯ ಹತ್ತಿರವೇ ವಾಸಿಸುತ್ತಿರಬಹುದು, ನಿಮ್ಮೊಂದಿಗೆ ಕೆಲಸ ಅಥವಾ ವ್ಯಾಸಂಗ ಮಾಡುತ್ತಿರಬಹುದು. ನಿಮ್ಮನ್ನು ಭೇಟಿಯಾಗಿ ಬೈಬಲ್ ಬಗ್ಗೆ ತಿಳಿಸಿರಬಹುದು. ಯೆಹೋವನ ಸಾಕ್ಷಿಗಳಾದ ನಾವು ನಿಜವಾಗಿಯೂ ಯಾರಾಗಿದ್ದೇವೆ? ನಾವೇಕೆ ಬೈಬಲ್ ವಿಷಯಗಳನ್ನು ಬೇರೆಯವರಿಗೆ ತಿಳಿಸುತ್ತೇವೆ?

**ಸಾಮಾನ್ಯ ಜನರಾಗಿದ್ದೇವೆ.** ಯೆಹೋವನ ಸಾಕ್ಷಿಗಳಾದ ನಾವು ಬೇರೆ ಬೇರೆ ಹಿನ್ನೆಲೆಯಿಂದ ಬಂದವರಾಗಿದ್ದೇವೆ. ಯೆಹೋವನ ಸಾಕ್ಷಿಗಳಾಗುವ ಮುಂಚೆ ನಮ್ಮಲ್ಲಿ ಕೆಲವರು ವಿಭಿನ್ನ ಧಾರ್ಮಿಕ ಆಚಾರಗಳನ್ನು ಪಾಲಿಸುತ್ತಿದ್ದೆವು. ಇನ್ನು ಕೆಲವರು ದೇವರೇ ಇಲ್ಲ ಎಂದು ನಂಬಿದ್ದೆವು. ಆದರೆ ಬೈಬಲ್‌ನಲ್ಲಿ ಏನಿದೆ ಎಂದು ಪರೀಕ್ಷಿಸಿ ತಿಳಿದುಕೊಂಡೆವು. (ಅಪೊಸ್ತಲರ ಕಾರ್ಯಗಳು 17:11) ಅದರ ಬೋಧನೆಗಳು ಸತ್ಯ ಎಂದು ಮನಗಂಡ ನಂತರ ಯೆಹೋವ ದೇವರನ್ನು ಆರಾಧಿಸುವ ಸ್ವಂತ ಆಯ್ಕೆ ಮಾಡಿದೆವು.

**ಬೈಬಲ್ ಓದುವುದರಿಂದ ಪ್ರಯೋಜನ ಪಡೆದಿದ್ದೇವೆ.** ನಾವು ಸಹ ಬದುಕಿನಲ್ಲಿ ಸಮಸ್ಯೆಗಳನ್ನು ಎದುರಿಸುತ್ತೇವೆ. ನಮ್ಮಲ್ಲೂ ದೌರ್ಬಲ್ಯಗಳಿವೆ. ಆದರೆ ಬೈಬಲ್‌ನಲ್ಲಿ ಇರುವ ತತ್ವಗಳಿಗೆ ಅನುಗುಣವಾಗಿ ಜೀವಿಸಲು ಪ್ರಯತ್ನ ಮಾಡುತ್ತಿರುವುದರಿಂದ ಜೀವನದಲ್ಲಿ ಅನೇಕ ಸುಧಾರಣೆಗಳನ್ನು ಕಂಡಿದ್ದೇವೆ. (ಕೀರ್ತನೆ 128:1, 2) ನಮ್ಮ ಈ ಸ್ವಂತ ಅನುಭವದ ಕಾರಣ ಬೈಬಲ್‌ನಿಂದ ಕಲಿತ ವಿಷಯಗಳನ್ನು ನಾವು ಬೇರೆಯವರಿಗೆ ತಿಳಿಸುತ್ತೇವೆ.

**ದೈವಿಕ ಮೌಲ್ಯಗಳನ್ನು ಪಾಲಿಸುತ್ತೇವೆ.** ನಮ್ಮ ಜೀವನಕ್ಕೆ ಬೇಕಾದ ಮೌಲ್ಯಗಳನ್ನು ದೇವರು ಬೈಬಲ್‌ನಲ್ಲಿ ತಿಳಿಸಿದ್ದಾನೆ. ಅವು ಆರೋಗ್ಯ ಕಾಪಾಡಿಕೊಳ್ಳುವಂತೆ, ಇತರರಿಗೆ ಗೌರವ ತೋರಿಸುವಂತೆ, ಪ್ರಾಮಾಣಿಕತೆ, ಪ್ರೀತಿ ಮುಂತಾದ ಗುಣಗಳನ್ನು ಬೆಳೆಸಿಕೊಳ್ಳುವಂತೆ ಸಹಾಯ ಮಾಡುತ್ತವೆ. ಆ ಮೌಲ್ಯಗಳನ್ನು ಅನುಸರಿಸುವಾಗ ಆರೋಗ್ಯಕರವಾದ ಉತ್ತಮ ಸಮಾಜ ಕಟ್ಟಲು ಸಾಧ್ಯ. ಏಕೆಂದರೆ ಅವು ಕುಟುಂಬದ ಬಾಂಧವ್ಯವನ್ನು ಬಿಗಿಗೊಳಿಸುತ್ತವೆ ಮತ್ತು ನೈತಿಕತೆಯನ್ನು ವರ್ಧಿಸುತ್ತವೆ. "ದೇವರು ಪಕ್ಷಪಾತಿಯಲ್ಲ" ಎನ್ನುವುದು ನಮಗೆ ಮನವರಿಕೆ ಆಗಿರುವ ಕಾರಣ ಜಾತಿ ರಾಷ್ಟ್ರ ಎಂಬ ಭೇದವಿಲ್ಲದ ಒಂದು ಅಂತಾರಾಷ್ಟ್ರೀಯ ಕುಟುಂಬವಾಗಿ ಅಣ್ಣತಮ್ಮಂದಿರಂತೆ ಜೀವಿಸುತ್ತಿದ್ದೇವೆ. ನಾವು ಸಾಮಾನ್ಯ ಜನರಾಗಿದ್ದರೂ ನಮ್ಮಲ್ಲಿ ಅಸಾಧಾರಣ ಭಾವೈಕ್ಯವಿದೆ.—ಅಪೊಸ್ತಲರ ಕಾರ್ಯಗಳು 4:13; 10:34, 35.

- ಬೇರೆಯವರಂತೆ ಯೆಹೋವನ ಸಾಕ್ಷಿಗಳೂ ಸಾಮಾನ್ಯ ಜನರು ಹೇಗೆ?
- ಯೆಹೋವನ ಸಾಕ್ಷಿಗಳು ಬೈಬಲ್‌ನಿಂದ ಯಾವ ಮೌಲ್ಯಗಳನ್ನು ಕಲಿತಿದ್ದಾರೆ?

# “ಯೆಹೋವನ ಸಾಕ್ಷಿಗಳು” ಎಂಬ ಹೆಸರೇಕೆ?

ಯೆಹೋವನ ಸಾಕ್ಷಿಗಳು ಎಂದ ಕೂಡಲೆ ಅನೇಕರು ಇದ್ಯಾವುದಪ್ಪ ಹೊಸ ಧರ್ಮ ಎಂದು ಕೇಳಬಹುದು. ನಿಜ ಸಂಗತಿ ಏನೆಂದರೆ 2,700 ವರ್ಷಗಳ ಹಿಂದೆಯೇ ಸತ್ಯ ದೇವರಾದ ಯೆಹೋವನ ಭಕ್ತರನ್ನು “ಸಾಕ್ಷಿಗಳು” ಎಂದು ಬೈಬಲಿನಲ್ಲಿ ಕರೆಯಲಾಗಿದೆ. (ಯೆಶಾಯ 43:10-12) ‘ಬೈಬಲ್ ವಿದ್ಯಾರ್ಥಿಗಳು’ ಎಂಬ ನಮ್ಮ ಹೆಸರನ್ನು ಇಸವಿ 1931ರಲ್ಲಿ ಯೆಹೋವನ ಸಾಕ್ಷಿಗಳು ಎಂದು ಬದಲಾಯಿಸಿದೆವು. ಕಾರಣ ಗೊತ್ತೇ?

**ಈ ಹೆಸರು ನಮ್ಮ ದೇವರು ಯಾರೆಂದು ತಿಳಿಸುತ್ತದೆ.** ಬೈಬಲನ್ನು ಬರೆದಾಗ ಅದರಲ್ಲಿ ಯೆಹೋವ ದೇವರ ಹೆಸರು ಸಾವಿರಾರು ಬಾರಿ ಇತ್ತು. ಆದರೆ ಬೈಬಲನ್ನು ಬೇರೆ ಬೇರೆ ಭಾಷೆಗಳಿಗೆ ಭಾಷಾಂತರಿಸಿದಾಗ ಅನೇಕರು ಈ ಹೆಸರಿನ ಬದಲು ಕರ್ತನು, ದೇವರು ಎಂಬಂಥ ಬಿರುದುಗಳನ್ನು ಬಳಸಿದರು. ನಾವು ಗಮನಿಸಬೇಕಾದ ವಿಷಯ ಏನೆಂದರೆ ಸತ್ಯ ದೇವರು ಸಾವಿರಾರು ವರ್ಷಗಳ ಹಿಂದೆಯೇ ಮೋಶೆ ಎಂಬ ವ್ಯಕ್ತಿಗೆ ತನ್ನ ಹೆಸರು ಯೆಹೋವ ಎಂದು ತಿಳಿಸಿ “ಇದು ಸದಾಕಾಲಕ್ಕೂ ನನ್ನ ಹೆಸರು” ಎಂದು ಸ್ಪಷ್ಟವಾಗಿ ಹೇಳಿದ್ದನು. (ವಿಮೋಚನಕಾಂಡ 3:15) ಯೆಹೋವ ಎಂಬ ಹೆಸರು ಸತ್ಯ ದೇವರಾದ ಆತನನ್ನು ಸುಳ್ಳು ದೇವರುಗಳಿಂದ ಪ್ರತ್ಯೇಕಿಸುತ್ತದೆ. ಆ ಪವಿತ್ರ ನಾಮವನ್ನು ಪ್ರತಿನಿಧಿಸುವುದು ನಮಗೆ ಹೆಮ್ಮೆಯ ಸಂಗತಿ.

**ನಮಗೆ ನಿಯೋಜಿಸಲಾಗಿರುವ ಕೆಲಸವನ್ನು ಒತ್ತಿಹೇಳುತ್ತದೆ.** ಪ್ರಾಚೀನ ಕಾಲದಲ್ಲಿ ಜೀವಿಸಿದ್ದ ದೇವಭಕ್ತ ಹೇಬೆಲನಿಂದ ಹಿಡಿದು ನಮ್ಮ ಕಾಲದವರೆಗೂ ಯೆಹೋವ ದೇವರ ಕುರಿತು ಸಾಕ್ಷಿನೀಡಿದ್ದ ಅನೇಕಾನೇಕ ಜನರ ಉದ್ದ ಪಟ್ಟಿ ಬೈಬಲಿನಲ್ಲಿದೆ. “ಸಾಕ್ಷಿಗಳ ಇಷ್ಟೊಂದು ದೊಡ್ಡ ಮೇಘ”ದಲ್ಲಿ ನೋಹ, ಅಬ್ರಹಾಮ, ಸಾರ, ಮೋಶೆ, ದಾವೀದ ಮುಂತಾದವರು ಸಹ ಸೇರಿದ್ದಾರೆ. (ಇಬ್ರಿಯ 11:4–12:1) ನ್ಯಾಯಾಲಯದ ಕಟಕಟೆಯಲ್ಲಿ ನಿಂತು ನಿರ್ದೋಷಿಯ ಪರ ಸಾಕ್ಷಿ ನೀಡುವ ವ್ಯಕ್ತಿಯಂತೆ ನಾವು ಸಹ ನಮ್ಮ ದೇವರ ಕುರಿತ ಸತ್ಯವನ್ನು ತಿಳಿಸಲು ದೃಢಸಂಕಲ್ಪ ಮಾಡಿದ್ದೇವೆ.

**ನಮ್ಮನ್ನು ಯೇಸುವಿನ ಅನುಯಾಯಿಗಳೆಂದು ತೋರಿಸುತ್ತದೆ.** ಬೈಬಲ್ ಯೇಸುವನ್ನು ನಂಬಿಗಸ್ತ ಹಾಗೂ ಸತ್ಯ ಸಾಕ್ಷಿ ಎಂದು ಹೇಳುತ್ತದೆ. (ಪ್ರಕಟನೆ 3:14) ದೇವರ “ಹೆಸರನ್ನು ತಿಳಿಯಪಡಿಸಿದ್ದೇನೆ” ಎಂದು ಅವನೇ ಹೇಳಿದ್ದಾನೆ. ಮಾತ್ರವಲ್ಲ ದೇವರ ಕುರಿತ “ಸತ್ಯಕ್ಕೆ ಸಾಕ್ಷಿ” ನೀಡಿದ್ದಾನೆ. (ಯೋಹಾನ 17:26; 18:37) ಹಾಗಾದರೆ ಕ್ರಿಸ್ತನ ಅನುಯಾಯಿಗಳು ಸಹ ಯೆಹೋವ ದೇವರ ನಾಮಧಾರಿಗಳಾಗಿದ್ದು ಆ ನಾಮದ ಕುರಿತು ಇತರರಿಗೆ ತಿಳಿಸಬೇಕಲ್ಲವೆ? ಅದನ್ನೇ ಯೆಹೋವನ ಸಾಕ್ಷಿಗಳು ಮಾಡುತ್ತಿದ್ದಾರೆ.

- ಬೈಬಲ್ ವಿದ್ಯಾರ್ಥಿಗಳು ಎಂಬ ಹೆಸರನ್ನು ಯೆಹೋವನ ಸಾಕ್ಷಿಗಳು ಎಂದು ಬದಲಿಸಲು ಕಾರಣವೇನು?
- ಯೆಹೋವ ದೇವರಿಗೆ ಯಾವ ಕಾಲದಿಂದಲೂ ಸಾಕ್ಷಿಗಳಿದ್ದಾರೆ?
- ಈ ಭೂಮಿಯ ಮೇಲೆ ಯೆಹೋವ ದೇವರ ಬಗ್ಗೆ ಅತ್ಯಧಿಕ ಪ್ರಮಾಣದಲ್ಲಿ ಸಾಕ್ಷಿ ನೀಡಿದ ವ್ಯಕ್ತಿ ಯಾರು?




**ಇನ್ನಷ್ಟು ತಿಳಿಯಲು . . .**

ಯೆಹೋವನ ಸಾಕ್ಷಿಗಳು ನಿಮ್ಮನ್ನು ಭೇಟಿಯಾಗುವಲ್ಲಿ ಅವರೊಂದಿಗೆ ಮಾತಾಡಿ ಪರಿಚಯ ಬೆಳೆಸಿಕೊಳ್ಳಿ. “ಯೆಹೋವನ ಸಾಕ್ಷಿಯಾಗಲು ಏನು ಕಾರಣ?” ಎಂದು ಅವರನ್ನು ಕೇಳಿ.

3

# ಬೈಬಲ್ ಸತ್ಯ ಪುನಃ ಹೇಗೆ ಬೆಳಕಿಗೆ ಬಂತು?



ಬೈಬಲ್ ವಿದ್ಯಾರ್ಥಿಗಳು, 1870ರ ದಶಕ




ಕಾವಲಿನಬುರುಜು ಪತ್ರಿಕೆಯ ಮೊದಲ ಪ್ರತಿ, 1879




ಕಾವಲಿನಬುರುಜು ಇಂದು

ಕ್ರಿಸ್ತನ ಮರಣದ ನಂತರ ಕ್ರೈಸ್ತರ ಮಧ್ಯೆ ಸುಳ್ಳು ಬೋಧಕರು ಹುಟ್ಟಿಕೊಂಡು ಬೈಬಲ್ ಸತ್ಯಗಳನ್ನು ತಿರುಚುವರು ಎಂದು ಬೈಬಲ್ ಮುಂಚೆಯೇ ತಿಳಿಸಿತ್ತು. (ಅಪೊಸ್ತಲರ ಕಾರ್ಯಗಳು 20:29, 30) ಹಾಗೆಯೇ ಆಯಿತು. ಸುಳ್ಳು ಬೋಧಕರು ಯೇಸುವಿನ ಬೋಧನೆಯೊಂದಿಗೆ ಸುಳ್ಳು ಧರ್ಮದ ತತ್ವಗಳನ್ನು ಮಿಶ್ರಗೊಳಿಸಿದರು. ಹೀಗೆ ನಕಲಿ ಕ್ರೈಸ್ತ ಧರ್ಮ ಹುಟ್ಟಿಕೊಂಡಿತು. (2 ತಿಮೊಥೆಯ 4:3, 4) ಹಾಗಿರುವಾಗ ಬೈಬಲ್ **ನಿಜವಾಗಿಯೂ** ಏನನ್ನು ಬೋಧಿಸುತ್ತದೆ ಎಂದು ನಮಗೆ ಗೊತ್ತಾಗಿದ್ದು ಹೇಗೆ?

**ತಕ್ಕ ಸಮಯದಲ್ಲಿ ಯೆಹೋವನು ಸತ್ಯವನ್ನು ಬೆಳಕಿಗೆ ತಂದನು.** ಅಂತ್ಯಕಾಲದಲ್ಲಿ "ತಿಳುವಳಿಕೆಯು ಹೆಚ್ಚುವುದು" ಎಂದು ಯೆಹೋವನು ಬಹಳ ಸಮಯದ ಹಿಂದೆಯೇ ತಿಳಿಸಿದ್ದನು. (ದಾನಿಯೇಲ 12:4) ಇಸವಿ 1870ರ ಸಮಯದಷ್ಟಕ್ಕೆ ಅದು ನಿಜವಾಗತೊಡಗಿತು. ಚರ್ಚಿನ ಅನೇಕ ಬೋಧನೆಗಳು ಬೈಬಲಿನ ಅನುಸಾರ ಇಲ್ಲವೆಂಬ ವಿಷಯವನ್ನು ಸತ್ಯಕ್ಕಾಗಿ ಹುಡುಕುತ್ತಿದ್ದ ಜನರ ಚಿಕ್ಕ ಗುಂಪೊಂದು ಮನಗಂಡಿತು. ಹಾಗಾಗಿ, ಸತ್ಯಾಂಶಗಳನ್ನು ಬೈಬಲಿನಲ್ಲಿಯೇ ಹುಡುಕಿ ತಿಳಿದುಕೊಳ್ಳುವ ಪ್ರಯತ್ನಕ್ಕೆ ಕೈಹಾಕಿದರು. ಅವರ ಪ್ರಯತ್ನವನ್ನು ಯೆಹೋವ ದೇವರು ಆಶೀರ್ವದಿಸಿ ಬೈಬಲ್ ವಚನಗಳ ತಿಳುವಳಿಕೆಯನ್ನು ಕೊಟ್ಟನು.

**ಸತ್ಯಕ್ಕಾಗಿ ಹುಡುಕುತ್ತಿದ್ದ ಗುಂಪು ಬೈಬಲನ್ನು ಆಳವಾಗಿ ಪರಿಶೀಲಿಸಿತು.** ಬೈಬಲ್ ವಿದ್ಯಾರ್ಥಿಗಳು ಎಂದು ಕರೆಯಲಾಗುತ್ತಿದ್ದ ಆ ಗುಂಪು ಬಳಸಿದ ವಿಧಾನವನ್ನೇ ನಾವಿಂದು ಬಳಸುತ್ತೇವೆ. ಅವರು ಒಂದು ವಿಷಯವನ್ನು ಆರಿಸಿ ಬೈಬಲ್ ಆ ಕುರಿತು ಏನು ಹೇಳುತ್ತದೆಂದು ಚರ್ಚಿಸುತ್ತಿದ್ದರು. ಬೈಬಲಿನಲ್ಲಿ ಯಾವುದಾದರೂ ವಿಷಯ ಅರ್ಥವಾಗದಿದ್ದಾಗ ಅದಕ್ಕೆ ಸಂಬಂಧಿಸಿದ ಬೇರೆ ವಚನಕ್ಕಾಗಿ ಹುಡುಕುತ್ತಿದ್ದರು. ಸಂಬಂಧಪಟ್ಟ ಎಲ್ಲಾ ವಚನಗಳು ಒಂದೇ ಅರ್ಥವನ್ನು ಕೊಡುತ್ತಿದೆ ಎಂದು ಮನಗಂಡಾಗ ತಾವು ಕಂಡುಕೊಂಡ ಆ ವಿಷಯವನ್ನು ಬರೆದಿಡುತ್ತಿದ್ದರು. ಹೀಗೆ ಬೈಬಲಿನಿಂದಲೇ ಬೈಬಲ್ ವಚನಗಳ ಅರ್ಥವನ್ನು ಹುಡುಕಿ ತಿಳಿದುಕೊಳ್ಳುತ್ತಿದ್ದರು. ಈ ವಿಧಾನದಿಂದ ದೇವರ ಹೆಸರು, ಆತನ ರಾಜ್ಯ, ಭೂಮಿ ಮತ್ತು ಮನುಷ್ಯರನ್ನು ಆತನು ಸೃಷ್ಟಿಸಿದ ಉದ್ದೇಶ, ಸತ್ತವರ ಸ್ಥಿತಿ ಹಾಗೂ ಪುನರುತ್ಥಾನದ ಕುರಿತ ಸತ್ಯಾಂಶವನ್ನು ಕಂಡುಕೊಂಡರು. ಈ ಸತ್ಯ ಅವರನ್ನು ಸುಳ್ಳು ಆಚಾರ ವಿಚಾರಗಳಿಂದ ಬಿಡುಗಡೆಗೊಳಿಸಿತು.—ಯೋಹಾನ 8:31, 32.

ಆ ಸತ್ಯವನ್ನು ಎಲ್ಲ ಜನರಿಗೆ ತಿಳಿಸಬೇಕಾದ ಜರೂರಿಯನ್ನು ಇಸವಿ 1879ರಷ್ಟಕ್ಕೆ ಬೈಬಲ್ ವಿದ್ಯಾರ್ಥಿಗಳು ಮನಗಂಡರು. ಹಾಗಾಗಿ ಅದೇ ವರ್ಷ ಅವರೊಂದು ಪತ್ರಿಕೆಯನ್ನು ಪ್ರಕಟಿಸಿದರು. ಕಾವಲಿನಬುರುಜು ಯೆಹೋವನ ರಾಜ್ಯವನ್ನು ಪ್ರಕಟಿಸುವುದು ಎಂಬ ಹೆಸರಿನಲ್ಲಿ ಅದು ಇಂದಿಗೂ ಸತತವಾಗಿ ಪ್ರಕಟಗೊಳ್ಳುತ್ತಿದೆ. ಬೈಬಲ್ ಸತ್ಯವನ್ನು ನಾವೀಗ 750ಕ್ಕೂ ಹೆಚ್ಚು ಭಾಷೆಗಳಲ್ಲಿ ಪ್ರಕಟಿಸುತ್ತಾ 240 ದೇಶಗಳಲ್ಲಿರುವ ಜನರೊಂದಿಗೆ ಹಂಚಿಕೊಳ್ಳುತ್ತಿದ್ದೇವೆ. ಬೈಬಲ್ ಸತ್ಯದ ತಿಳುವಳಿಕೆ ಇಷ್ಟು ಪ್ರಮಾಣದಲ್ಲಿ ಹಿಂದೆಂದೂ ಲಭ್ಯವಿರಲಿಲ್ಲ!

- ಕ್ರಿಸ್ತನ ಮರಣದ ನಂತರ ಸುಳ್ಳು ಬೋಧಕರು ಬೈಬಲ್ ಸತ್ಯಗಳನ್ನು ಏನು ಮಾಡಿದರು?
- ದೇವರ ವಾಕ್ಯದಲ್ಲಿರುವ ಸತ್ಯವನ್ನು ಹುಡುಕಿ ಕಂಡುಕೊಳ್ಳಲು ನಮ್ಮಿಂದ ಹೇಗೆ ಸಾಧ್ಯವಾಯಿತು?

4

# ನೂತನ ಲೋಕ ಭಾಷಾಂತರ ಬೈಬಲನ್ನು ಹೊರತರಲು ಕಾರಣ?



ಯೆಹೋವನ ಸಾಕ್ಷಿಗಳಾದ ನಾವು ಅನೇಕ ವರ್ಷಗಳ ತನಕ ಆಗ ಲಭ್ಯವಿದ್ದ ಬೈಬಲ್‌ಗಳನ್ನು ಉಪಯೋಗಿಸುತ್ತಿದ್ದೆವು, ಮುದ್ರಿಸಿ ವಿತರಿಸುತ್ತಿದ್ದೆವು. ಆದರೆ ಜನರು "ಸತ್ಯದ ನಿಷ್ಕೃಷ್ಟ ಜ್ಞಾನವನ್ನು" ಪಡೆದುಕೊಳ್ಳಬೇಕಾದರೆ ಒಂದು ಹೊಸ ಭಾಷಾಂತರದ ಅವಶ್ಯವಿದೆ ಎನ್ನುವುದನ್ನು ಮನಗಂಡೆವು. ಏಕೆಂದರೆ ಪ್ರತಿಯೊಬ್ಬ ಮಾನವನು ಸತ್ಯದ ನಿಷ್ಕೃಷ್ಟ ಜ್ಞಾನ ಪಡೆಯಬೇಕೆನ್ನುವುದು ದೇವರ ಇಷ್ಟ. (1 ತಿಮೊಥೆಯ 2:3, 4) ಹಾಗಾಗಿ, ಎಲ್ಲ ಜನರಿಗೆ ಸುಲಭವಾಗಿ ಅರ್ಥವಾಗುವ ಸರಳ ಭಾಷೆಯಲ್ಲಿ ಒಂದು ಬೈಬಲನ್ನು ಹೊರತಂದೆವು. *ನೂತನ ಲೋಕ ಭಾಷಾಂತರ* ಎಂದು ಕರೆಯಲಾಗುವ ಆ ಬೈಬಲ್ 1950ರಿಂದ ಆರಂಭಿಸಿ ಹಲವಾರು ಸಂಪುಟಗಳಾಗಿ ಬಿಡುಗಡೆ ಆಯಿತು. ಅನುವಾದದಲ್ಲಿ ನಿಷ್ಕೃಷ್ಟತೆಯನ್ನು ಕಾಪಾಡಿಕೊಳ್ಳಲಾಗಿದ್ದು ಇಂದು ಈ ಭಾಷಾಂತರ ಕನ್ನಡವನ್ನೂ ಸೇರಿಸಿ 130ಕ್ಕೂ ಅಧಿಕ ಭಾಷೆಯಲ್ಲಿ ಲಭ್ಯ.



ಕಾಂಗೊ (ಕಿನ್ಶಾಸ)

**ಬೈಬಲ್—ಸರಳ ಭಾಷೆಯಲ್ಲಿ ಇರಬೇಕು.** ಕಾಲ ಬದಲಾದಂತೆ ಭಾಷೆ ಬದಲಾಗುತ್ತದೆ. ಅನೇಕ ಬೈಬಲ್ ಭಾಷಾಂತರಗಳಲ್ಲಿ ಬಳಸಲಾಗಿದ್ದ ಪದಗಳು ಹಳೆಯದ್ದಾಗಿದ್ದವು ಹಾಗೂ ಹೆಚ್ಚಿನವರಿಗೆ ಅರ್ಥವಾಗುತ್ತಿರಲಿಲ್ಲ. ಅಲ್ಲದೆ ಬೈಬಲಿನ ಮೂಲ ಪ್ರತಿಗಳಿಗೆ ನಿಖರವಾಗಿ ಹೋಲುವ ಪ್ರಾಚೀನ ಹಸ್ತಪ್ರತಿಗಳು ದೊರೆತವು. ಇವು ಬೈಬಲ್‌ನಲ್ಲಿ ಉಪಯೋಗಿಸಲಾಗಿರುವ ಹೀಬ್ರು, ಅರಮೇಯಿಕ್ ಹಾಗೂ ಗ್ರೀಕ್ ಭಾಷೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯಕಾರಿಯಾಗಿದ್ದವು.



ರುವಾಂಡ

**ಬೈಬಲ್—ದೇವರ ವಾಕ್ಯದ ಮೂಲಾರ್ಥವನ್ನು ನಿಖರವಾಗಿ ತಿಳಿಸಬೇಕು.** ದೇವರ ವಾಕ್ಯವನ್ನು ತರ್ಜುಮೆ ಮಾಡುವವರು ಅದರ ಮೂಲಾರ್ಥವನ್ನು ಬದಲಾಯಿಸದೆ ನಿಖರವಾಗಿ ತಿಳಿಸಬೇಕು. ಆದರೆ ಅನೇಕ ಬೈಬಲ್ ಭಾಷಾಂತರಗಳಲ್ಲಿ ಯೆಹೋವ ದೇವರ ಹೆಸರನ್ನೇ ತೆಗೆದುಬಿಟ್ಟಿದ್ದಾರೆ.

**ಬೈಬಲ್—ತನ್ನ ಗ್ರಂಥಕರ್ತನಾದ ಯೆಹೋವ ದೇವರಿಗೆ ಮಹಿಮೆ ಕೊಡಬೇಕು.** (2 ಸಮುವೇಲ 23:2) ಕೆಳಗಿನ ಚಿತ್ರದಲ್ಲಿರುವಂತೆ ಬೈಬಲಿನ ಪ್ರಾಚೀನ ಹಸ್ತಪ್ರತಿಗಳಲ್ಲಿ ಯೆಹೋವ ದೇವರ ಹೆಸರು ಸುಮಾರು 7,000 ಬಾರಿ ಕಂಡುಬರುತ್ತದೆ. *ನೂತನ ಲೋಕ ಭಾಷಾಂತರ* ಬೈಬಲಿನಲ್ಲಿ ದೇವರ ಹೆಸರನ್ನು ಪುನಃಸ್ಥಾಪಿಸಲಾಗಿದೆ. (ಕೀರ್ತನೆ 83:18) *ನೂತನ ಲೋಕ ಭಾಷಾಂತರ* ಬೈಬಲನ್ನು ಅನುವಾದ ಮಾಡಲು ವರ್ಷಾನುಗಟ್ಟಲೆ ಹಾಕಿದ ಪರಿಶ್ರಮ ವ್ಯರ್ಥವಾಗಲಿಲ್ಲ. ಅದು ಓದಲು ಸುಲಭವಾಗಿದ್ದು ಯೆಹೋವ ದೇವರ ಆಲೋಚನೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದು. ನಿಮ್ಮ ಭಾಷೆಯಲ್ಲಿ *ನೂತನ ಲೋಕ ಭಾಷಾಂತರ* ಬೈಬಲ್ ಇರಲಿ ಇಲ್ಲದಿರಲಿ ಪ್ರತಿ ದಿನ ಯೆಹೋವ ದೇವರ ವಾಕ್ಯವನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಲು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.—ಯೆಹೋಶುವ 1:8; ಕೀರ್ತನೆ 1:2, 3.

- *ನೂತನ ಲೋಕ ಭಾಷಾಂತರ* ಬೈಬಲನ್ನು ಹೊರತರಲು ಕಾರಣವೇನು?
- ದೇವರ ಇಷ್ಟವನ್ನು ತಿಳಿದುಕೊಳ್ಳಲು ಇಚ್ಛಿಸುವವರು ಪ್ರತಿನಿತ್ಯ ಏನು ಮಾಡಬೇಕು?



ÖNB/Wien, G 39777

*ಕ್ರಿ.ಶ. ಮೂರು ಅಥವಾ ನಾಲ್ಕನೆಯ ಶತಮಾನದ ಸಿಮಕಸ್ ಭಾಷಾಂತರದ ಅವಶೇಷ. ಕೀರ್ತನೆ 69:31ರಲ್ಲಿ ಯೆಹೋವ ಎಂಬ ಹೆಸರು ಇರುವುದನ್ನು ಗಮನಿಸಬಹುದು.*

## ಇನ್ನಷ್ಟು ತಿಳಿಯಲು . . .

*ನೂತನ ಲೋಕ ಭಾಷಾಂತರ* ಬೈಬಲಿನ "ಮುನ್ನುಡಿ" ಓದಿ, ಈ ಪ್ರಶ್ನೆಗೆ ಉತ್ತರ ತಿಳಿದುಕೊಳ್ಳಿ: "ತರ್ಜುಮೆ ಸಮಿತಿ ಯಾವ ವಿಶೇಷ ಜವಾಬ್ದಾರಿಯೊಂದಿಗೆ ಈ ಬೈಬಲನ್ನು ಹೊರತಂದಿದೆ?" ಈ ಕೆಳಗಿನ ವಚನಗಳು ಇತರ ಬೈಬಲ್‌ಗಳಲ್ಲಿ ಹೇಗಿವೆ *ನೂತನ ಲೋಕ ಭಾಷಾಂತರ* ಬೈಬಲಿನಲ್ಲಿ ಹೇಗೆ ಹಾಕಲಾಗಿದೆ ಎಂದು ಹೋಲಿಸಿ ನೋಡಿ: ಮತ್ತಾಯ 5:3; 11:12; ಅಪೊಸ್ತಲರ ಕಾರ್ಯಗಳು 2:34, 35; 1 ಕೊರಿಂಥ 10:24, 25.

5

# ನಮ್ಮ ಸಭಾ ಕೂಟಗಳ ಪ್ರಯೋಜನವೇನು?



ಅರ್ಜೆಂಟೀನ



ಸಿಯೆರಾ ಲಿಯೋನ್

ಬೆಲ್ಜಿಯಮ್



ಅನೇಕ ಜನರು ಪ್ರಾರ್ಥನಾ ಕೂಟಗಳಿಗೆ ಹೋಗುವುದಿಲ್ಲ. ಕಾರಣ ಅವರಿಗೆ ಬೇಕಾದ ಆಧ್ಯಾತ್ಮ ಮಾರ್ಗದರ್ಶನ ಹಾಗೂ ಸಾಂತ್ವನ ಅಲ್ಲಿ ದೊರೆಯುತ್ತಿಲ್ಲ. ಹಾಗಾದರೆ ಯೆಹೋವನ ಸಾಕ್ಷಿಗಳ ಸಭೆಗೆ ಹೋಗುವುದರಿಂದ ನಿಮಗೆ ಪ್ರಯೋಜನವಿದೆಯೇ? ಅಲ್ಲಿ ನೀವೇನು ಪಡೆಯುವಿರಿ?

**ಪ್ರೀತಿ ಮುತುವರ್ಜಿ ಇರುವ ಜನರ ಸ್ನೇಹ ಹಾಗೂ ಸಂತೋಷ ಪಡೆಯುವಿರಿ.** ಒಂದನೇ ಶತಮಾನದಲ್ಲಿ ಕ್ರೈಸ್ತರು ಸಭೆ ಸೇರಿ ದೇವರನ್ನು ಆರಾಧಿಸುತ್ತಿದ್ದರು. ಬೈಬಲನ್ನು ಓದಿ ಅಧ್ಯಯನ ಮಾಡುತ್ತಿದ್ದರು. ಅಣ್ಣತಮ್ಮ ಅಕ್ಕತಂಗಿಯರಂತೆ ಬೆಂಬಲ ಪ್ರೋತ್ಸಾಹ ನೀಡುತ್ತಿದ್ದರು. (ಇಬ್ರಿಯ 10:24, 25) ಅಲ್ಲಿ ಪ್ರೀತಿ ವಾತ್ಸಲ್ಯ ತುಂಬಿತುಳುಕುತ್ತಿತ್ತು. ಅವರ ನಡುವೆ ನಿಜವಾದ ಸ್ನೇಹಬಾಂಧವ್ಯ ಇತ್ತು. (2 ಥೆಸಲೊನೀಕ 1:3; 3 ಯೋಹಾನ 14) ಆ ಕ್ರೈಸ್ತರ ನಮೂನೆಯನ್ನೇ ಯೆಹೋವನ ಸಾಕ್ಷಿಗಳು ಪಾಲಿಸುತ್ತಿದ್ದಾರೆ. ಅವರ ಸಭೆಗಳಲ್ಲಿ ಸ್ನೇಹ ಸಂಭ್ರಮದ ವಾತಾವರಣವಿದೆ.

**ಬೈಬಲ್‌ನಲ್ಲಿರುವ ತತ್ವಗಳನ್ನು ಕಾರ್ಯರೂಪಕ್ಕೆ ಹಾಕಲು ಕಲಿತು ಪ್ರಯೋಜನ ಪಡೆಯುವಿರಿ.** ಬೈಬಲ್‌ನಲ್ಲಿ ತಿಳಿಸಿರುವಂತೆ ಇಂದು ಸಹ ಸ್ತ್ರೀಪುರುಷರು ಹಾಗೂ ಮಕ್ಕಳು ಸಭೆ ಸೇರುತ್ತಾರೆ. ಅರ್ಹ ಉಪನ್ಯಾಸಕರು ಬೈಬಲ್‌ನಲ್ಲಿರುವ ತತ್ವಗಳನ್ನು ಕಾರ್ಯರೂಪಕ್ಕೆ ಹಾಕುವುದು ಹೇಗೆಂದು ನಮಗೆ ಕಲಿಸುತ್ತಾರೆ. (ಧರ್ಮೋಪದೇಶಕಾಂಡ 31:12; ನೆಹೆಮೀಯ 8:8) ಕಾರ್ಯಕ್ರಮದಲ್ಲಿ ಸಭಿಕರೆಲ್ಲರೂ ಭಾಗವಹಿಸುವ ಹಾಗೂ ಜೊತೆಗೂಡಿ ಸ್ತುತಿಗೀತೆಗಳನ್ನು ಹಾಡುವ ಅವಕಾಶವಿದೆ. ಇದು ದೇವರ ಮೇಲೆ ನಾವಿಟ್ಟಿರುವ ನಂಬಿಕೆ, ನಮಗಿರುವ ಭವ್ಯ ನಿರೀಕ್ಷೆ ಇವನ್ನೆಲ್ಲ ಹಂಚಿಕೊಳ್ಳಲು ಸಂದರ್ಭ ಒದಗಿಸುತ್ತದೆ.—ಇಬ್ರಿಯ 10:23.

**ದೇವರ ಮೇಲೆ ನಿಮ್ಮ ನಂಬಿಕೆ ಹೆಚ್ಚಿ ಆಶೀರ್ವಾದ ಪಡೆಯುವಿರಿ.** ಯೇಸುವಿನ ಅನುಯಾಯಿಗಳಲ್ಲಿ ಒಬ್ಬನಾಗಿದ್ದ ಪೌಲ ಎಂಬವನೊಮ್ಮೆ ಒಂದು ಸಭೆಗೆ ಪತ್ರ ಬರೆದು "ನಾನು ನಿಮ್ಮನ್ನು ನೋಡಲು ಹಂಬಲಿಸುತ್ತಿದ್ದೇನೆ, . . . ಉತ್ತೇಜನವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಅಂದರೆ ನಿಮ್ಮ ನಂಬಿಕೆಯಿಂದ ನಾನು ಮತ್ತು ನನ್ನ ನಂಬಿಕೆಯಿಂದ ನೀವು ಉತ್ತೇಜಿಸಲ್ಪಡಲು ಸಾಧ್ಯವಾಗಬಹುದು" ಎಂದು ತಿಳಿಸಿದನು. (ರೋಮನ್ನರಿಗೆ 1:11, 12) ಹೌದು ನಾವು ಪ್ರತಿವಾರವೂ ಸಭೆಗೆ ಹಾಜರಾಗಿ ದೇವಭಕ್ತ ಜನರೊಂದಿಗೆ ಬೆರೆಯುವಾಗ ದೇವರ ಮೇಲೆ ನಮ್ಮ ನಂಬಿಕೆ ಹೆಚ್ಚುತ್ತೆ. ಅಲ್ಲದೆ ಬೈಬಲ್‌ನಲ್ಲಿರುವ ತತ್ವಗಳನ್ನು ಕಾರ್ಯರೂಪಕ್ಕೆ ಹಾಕಲು ಸ್ಫೂರ್ತಿ ಸಿಗುತ್ತೆ.

ನೀವೇಕೆ ನಮ್ಮ ಈ ವಾರದ ಪ್ರಾರ್ಥನಾ ಕೂಟಕ್ಕೆ ಹಾಜರಾಗಿ ಮೇಲೆ ತಿಳಿಸಿದ್ದನ್ನೆಲ್ಲ ಖುದ್ದಾಗಿ ಆಸ್ವಾದಿಸಬಾರದು? ನಿಮ್ಮನ್ನು ಸ್ನೇಹಪೂರ್ವಕವಾಗಿ ಬರಮಾಡಿಕೊಳ್ಳಲಾಗುವುದು. ಕಾರ್ಯಕ್ರಮ ಉಚಿತವಾಗಿದೆ.

- ನಮ್ಮ ಸಭೆಯ ಕಾರ್ಯಕಲಾಪ ಯಾವ ನಮೂನೆಯನ್ನು ಆಧರಿಸಿದೆ?
- ಯೆಹೋವನ ಸಾಕ್ಷಿಗಳ ಸಭೆಗೆ ಹಾಜರಾಗುವುದರಿಂದ ಯಾವೆಲ್ಲ ಪ್ರಯೋಜನ ಸಿಗುತ್ತದೆ?

### ಇನ್ನಷ್ಟು ತಿಳಿಯಲು . . .

ನಮ್ಮ ಸಭೆಯ ಕಾರ್ಯಕಲಾಪ ನಡೆಯುವ 'ರಾಜ್ಯ ಸಭಾಗೃಹ'ವನ್ನು ನೋಡಲು ಇಷ್ಟಪಡುವಲ್ಲಿ ಯೆಹೋವನ ಸಾಕ್ಷಿಗಳ ಬಳಿ ಹೇಳಿ. ಅವರು ನಿಮಗೆ ತೋರಿಸುವರು.





ಮಲೇಷಿಯ

6

# ಯೆಹೋವನ ಸಾಕ್ಷಿಗಳೇಕೆ ಪರಸ್ಪರ ಸಾಹಚರ್ಯಕ್ಕೆ ಮಹತ್ವ ಕೊಡುತ್ತಾರೆ?



ಮಡಗಾಸ್ಕರ್

ಮಳೆಯೇ ಇರಲಿ ಬಿಸಿಲೇ ಇರಲಿ. ಬೆಟ್ಟ ಗುಡ್ಡ ದಾಟಬೇಕಾಗಿರಲಿ ನಾವು ಪ್ರಾರ್ಥನಾ ಕೂಟಗಳಿಗೆ ತಪ್ಪದೇ ಹಾಜರಾಗುತ್ತೇವೆ. ಬದುಕಿನಲ್ಲಿ ಎಷ್ಟೇ ಕಷ್ಟಗಳಿರಲಿ ಇಡೀ ದಿನ ಕೆಲಸ ಮಾಡಿ ಬಳಲಿರಲಿ ನಾವು ಮಾತ್ರ ಸಭೆಗೆ ಹಾಜರ್. ಇಷ್ಟೆಲ್ಲ ತೊಡಕು ಗಳಿದ್ದರೂ ಯೆಹೋವನ ಸಾಕ್ಷಿಗಳು ಪರಸ್ಪರ ಸಾಹಚರ್ಯವನ್ನು ಇಷ್ಟಪಡುವುದೇಕೆ?

**ಒಳಿತಿರುವುದರಿಂದ.** ಸಭೆ ಸೇರುವವರು "ಪರಸ್ಪರ ಹಿತಚಿಂತಕರಾಗಿ" ಇರಬೇಕೆಂದು ಪೌಲ ಹೇಳಿದನು. (ಇಬ್ರಿಯ 10:24) ಅವನ ಮಾತಿನ ಅರ್ಥ ಸಭೆಗೆ ಬರುವವರು ಒಬ್ಬರನ್ನೊಬ್ಬರು ಚೆನ್ನಾಗಿ ತಿಳಿದುಕೊಳ್ಳಬೇಕು, ಮುತುವರ್ಜಿ ಕಾಳಜಿ ವಹಿಸಬೇಕು ಎನ್ನುವುದೇ. ನಾವಿಂದು ಎದುರಿಸುತ್ತಿರುವ ಕಷ್ಟಗಳನ್ನು ಸಭೆಯಲ್ಲಿರುವ ಕೆಲವರು ಈಗಾಗಲೇ ಜಯಿಸಿ ಬಂದಿರಬಹುದು. ಅವರೊಂದಿಗೆ ಮಾತಾಡಿ ಅವರ ಅನುಭವವನ್ನು ತಿಳಿದುಕೊಳ್ಳುವುದರಿಂದ ಖಂಡಿತ ನಮಗೆ ಒಳಿತಾಗುತ್ತದೆ. ನಮ್ಮ ಕಷ್ಟ ಗಳನ್ನು ಜಯಿಸಲು ನೆರವಾಗುತ್ತದೆ.



ನಾರ್ವೆ

**ನಿಜ ಸ್ನೇಹಿತರು ಸಿಗುವುದರಿಂದ.** ಸಭೆಯಾಗಿ ಕೂಡಿಬರುವ ನಾವು ಕೇವಲ ಪರಿಚ ಯಸ್ಥರಷ್ಟೇ ಅಲ್ಲ. ಅದಕ್ಕಿಂತಲೂ ಹೆಚ್ಚಾದ ಅತ್ಯಾಪ್ತ ಸ್ನೇಹ ಬಾಂಧವ್ಯ ನಮ್ಮಲ್ಲಿದೆ. ವಿನೋದ ವಿಹಾರ ಮುಂತಾದ ಬೇರೆ ಸಂದರ್ಭದಲ್ಲೂ ನಾವು ಒಟ್ಟುಗೂಡುತ್ತೇವೆ. ಇಂಥ ಸಾಹಚರ್ಯ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲು ನೆರವಾಗಿ ನಮ್ಮ ನಡು ವಿನ ಪ್ರೀತಿ ಸಾಮರಸ್ಯವನ್ನು ಬಿಗಿಯಾಗಿಸುತ್ತದೆ. ಈ ನಮ್ಮ ಸ್ನೇಹಿತರಲ್ಲಿ ಯಾರಿಗಾ ದರೂ ಸಮಸ್ಯೆ ಎದುರಾದಲ್ಲಿ ನಾವು ಹೆಗಲಿಗೆ ಹೆಗಲಾಗಿರುತ್ತೇವೆ. (ಜ್ಞಾನೋಕ್ತಿ 17:17) ಸಭೆಗೆ ಬರುವ ಎಲ್ಲರೊಂದಿಗೆ ನಾವು ಭೇದಭಾವವಿಲ್ಲದೆ ಬೆರೆಯುತ್ತೇವೆ. ಹೀಗೆ 'ಪರಸ್ಪರ ಹಿತವನ್ನು ಚಿಂತಿಸುವವರು' ಆಗಿದ್ದೇವೆ.—1 ಕೊರಿಂಥ 12:25, 26.



ಲೆಬನಾನ್

ದೇವರ ಇಷ್ಟವನ್ನು ಮಾಡುತ್ತಿರುವವರ ಜೊತೆ ನೀವು ಗೆಳೆತನ ಬೆಳೆಸಿಕೊಳ್ಳಬೇಕು ಎನ್ನು ವುದೇ ನಮ್ಮಾಶೆ. ಆ ರೀತಿಯ ಜನರನ್ನು ಯೆಹೋವನ ಸಾಕ್ಷಿಗಳ ಸಭೆಯಲ್ಲಿ ಕಾಣಬಹುದು. ನಮ್ಮೊಂದಿಗಿನ ಒಡನಾಟವನ್ನು ತುಂಡರಿಸುವಂಥ ಅನೇಕ ವಿಷಯ ಗಳು ನಿಮಗೆ ಎದುರಾಗಬಹುದಾದರೂ ನಮ್ಮೊಂದಿಗಿನ ಸ್ನೇಹ ಸಂಪರ್ಕ ಕಡಿದುಹೋ ಗದಿರಲಿ.

- ■ ನಾವೇಕೆ ನಮ್ಮ ಸಾಹಚರ್ಯಕ್ಕೆ ಮಹತ್ವ ಕೊಡುತ್ತೇವೆ?
- ■ ನಮ್ಮ ಸಭೆಗೆ ಯಾವಾಗ ಬರ್ತೀರಾ?

ಇಟಲಿ




ನ್ಯೂಜಿಲೆಂಡ್


ಜಪಾನ್


ಉಗಾಂಡ


ಲಿಥುವೇನಿಯ

7

# ನಮ್ಮ ಸಭಾ ಕೂಟಗಳಲ್ಲಿ ಯಾವ್ಯಾವ ಕಾರ್ಯಕ್ರಮ ನಡೆಯುತ್ತೆ?

ಪ್ರಾಚೀನ ಕಾಲದ ಸಭಾ ಕೂಟಗಳಲ್ಲಿ ಸ್ತುತಿಗೀತೆ ಹಾಡುವುದು, ಪ್ರಾರ್ಥನೆ ಮಾಡುವುದು, ಬೈಬಲ್ ಓದಿ ಚರ್ಚಿಸುವುದು ಪ್ರಮುಖವಾಗಿತ್ತು. (1 ಕೊರಿಂಥ 14:26) ನಮ್ಮ ಸಭಾ ಕೂಟಗಳಲ್ಲಿ ಸಹ ಅದೇ ವಿಧಾನ ಅನುಸರಿಸಲಾಗುತ್ತದೆ.

**ನಮ್ಮ ಬದುಕಿಗೆ ನೆರವಾಗುವ ಬೈಬಲ್ ಆಧರಿತ ಉಪದೇಶ ಕಾರ್ಯಕ್ರಮ.** ವಾರಾಂತ್ಯದಲ್ಲಿ 30 ನಿಮಿಷಗಳ ***ಬೈಬಲ್ ಉಪನ್ಯಾಸ*** ಇರುತ್ತದೆ. ನಮ್ಮ ಬದುಕಿನಲ್ಲಿ ಬೈಬಲ್ ಸಲಹೆಗಳನ್ನು ಅಳವಡಿಸುವುದು ಹೇಗೆಂದು ಆ ಉಪನ್ಯಾಸದಲ್ಲಿ ವಿವರಿಸಲಾಗುತ್ತದೆ. ಎಲ್ಲರೂ ತಮ್ಮ ತಮ್ಮ ಬೈಬಲ್‌ಗಳನ್ನು ತರುತ್ತಾರೆ ಮತ್ತು ಅಮೂಲ್ಯ ಸಲಹೆಗಳನ್ನು ಗುರುತಿಸಿಕೊಳ್ಳುತ್ತಾರೆ. ಉಪನ್ಯಾಸದ ನಂತರ ***"ಕಾವಲಿನಬುರುಜು" ಅಧ್ಯಯನ*** ಎಂಬ ಇನ್ನೊಂದು ಕಾರ್ಯಕ್ರಮ ಇರುತ್ತದೆ. ಒಂದು ತಾಸಿನ ಈ ಕಾರ್ಯಕ್ರಮದಲ್ಲಿ ಕಾವಲಿನಬುರುಜು ಎಂಬ ಮಾಸಿಕದಿಂದ (ಅಧ್ಯಯನ ಆವೃತ್ತಿ) ಲೇಖನವೊಂದನ್ನು ಚರ್ಚಿಸಲಾಗುತ್ತದೆ. ಹಾಜರಿರುವ ಎಲ್ಲರೂ ಈ ಚರ್ಚೆಯಲ್ಲಿ ಪಾಲ್ಗೊಳ್ಳಬಹುದು. ಬೈಬಲ್ ಮಾರ್ಗದರ್ಶನೆಗಳನ್ನು ಜೀವನದಲ್ಲಿ ಪಾಲಿಸುವುದು ಹೇಗೆಂದು ಈ ಚರ್ಚೆಯಿಂದ ಕಲಿಯಬಹುದು. ಈ ಕಾರ್ಯಕ್ರಮದ ವಿಶೇಷತೆ ಏನೆಂದರೆ, ಭೂವ್ಯಾಪಕವಾಗಿರುವ 1,10,000ಕ್ಕೂ ಅಧಿಕ ಸಭೆಗಳಲ್ಲಿ ಚರ್ಚಿಸಲಾಗುವ ಲೇಖನ ಒಂದೇ ಆಗಿರುತ್ತದೆ.

**ನಮ್ಮ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯಕ್ರಮ.** ವಾರಮಧ್ಯದ ಒಂದು ಸಂಜೆ ***ನಮ್ಮ ಕ್ರೈಸ್ತ ಜೀವನ ಮತ್ತು ಸೇವೆ*** ಎಂಬ ಮೂರು ಭಾಗಗಳಿರುವ ಕಾರ್ಯಕ್ರಮವಿರುತ್ತದೆ. ಇದು ಪ್ರತಿ ತಿಂಗಳ ಜೀವನ ಮತ್ತು ಸೇವೆ ಕೂಟದ ಕೈಪಿಡಿಯ ಮೇಲೆ ಆಧರಿತವಾಗಿರುತ್ತದೆ. ಈ ಕೂಟದ ಮೊದಲನೇ ಭಾಗ ಬೈಬಲಿನಲ್ಲಿರುವ ರತ್ನಗಳು. ಇದು ಮೊದಲೇ ಓದಿಕೊಂಡು ಬಂದಿರುವ ಬೈಬಲಿನ ಕೆಲವು ಅಧ್ಯಾಯಗಳನ್ನು ಚೆನ್ನಾಗಿ ಪರಿಚಯ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ನಂತರ ಸೇವೆಯಲ್ಲಿ ನಿಪುಣರಾಗಲು ಕಲಿಯಿರಿ ಎಂಬ ಭಾಗದಲ್ಲಿ ಬೈಬಲಿನ ಬಗ್ಗೆ ಇತರರೊಂದಿಗೆ ಚರ್ಚಿಸುವುದು ಹೇಗೆಂದು ತೋರಿಸುವ ಅಭಿನಯಗಳಿರುತ್ತವೆ. ಓದುವ ಮತ್ತು ಮಾತಾಡುವ ಸಾಮರ್ಥ್ಯವನ್ನು ಹೇಗೆ ಉತ್ತಮಗೊಳಿಸುವುದು ಎಂದು ಸಲಹೆ ನೀಡಲಾಗುತ್ತದೆ. (1 ತಿಮೊಥೆಯ 4:13) ಕೊನೆಯಲ್ಲಿ ನಮ್ಮ ಕ್ರೈಸ್ತ ಜೀವನ ಎಂಬ ಭಾಗದಲ್ಲಿ ಬೈಬಲ್ ತತ್ವಗಳನ್ನು ದಿನನಿತ್ಯದ ಜೀವನದಲ್ಲಿ ಹೇಗೆ ಅನ್ವಯಿಸುವುದು ಎಂದು ಪರಿಗಣಿಸಲಾಗುತ್ತದೆ. ಇದರಲ್ಲಿ ಬೈಬಲನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಲಿಕ್ಕಾಗಿ ಪ್ರಶ್ನೋತ್ತರ ಚರ್ಚೆ ಇರುತ್ತದೆ.

ನಮ್ಮ ಸಭಾ ಕೂಟಗಳಿಗೆ ನೀವು ಹಾಜರಾಗುವುದಾದರೆ ಅಲ್ಲಿ ನೀಡಲಾಗುವ ಬೈಬಲ್ ಶಿಕ್ಷಣ ಅದ್ಭುತವಾದದ್ದು ಎಂದು ಪ್ರತ್ಯಕ್ಷ ಕಾಣುವಿರಿ.—ಯೆಶಾಯ 54:13.

- ಯೆಹೋವನ ಸಾಕ್ಷಿಗಳ ಸಭಾ ಕೂಟಗಳಲ್ಲಿ ಯಾವ ಕಾರ್ಯಕ್ರಮಗಳಿವೆ?
- ಯಾವ ಕಾರ್ಯಕ್ರಮಕ್ಕೆ ಹಾಜರಾಗಲು ಯೋಜಿಸಿದ್ದೀರಿ?

**ಇನ್ನಷ್ಟು ತಿಳಿಯಲು . . .**

ಮುಂದಿನ ಕೆಲವು ಸಭಾಕೂಟಗಳಲ್ಲಿ ನಾವು ಚರ್ಚಿಸಲಿರುವ ವಿಷಯಗಳನ್ನು ಓದಿ ಪರಿಶೀಲಿಸಿ. ನಿಮ್ಮ ದಿನನಿತ್ಯ ಬದುಕಿಗೆ ಬೈಬಲ್ ಹೇಗೆ ನೆರವಾಗುತ್ತದೆ ಎನ್ನುವುದನ್ನು ಗಮನಿಸಿ.

# ಸಭೆಗೆ ಹೋಗುವಾಗ ಸಭ್ಯ ಉಡುಗೆ ಧರಿಸಬೇಕು ಏಕೆ?

ಯೆಹೋವನ ಸಾಕ್ಷಿಗಳು ಸಭೆಗೆ ಹೋಗುವಾಗ ನೀಟಾಗಿ ಉಡುಗೆ ತೊಟ್ಟುಕೊಳ್ಳುತ್ತಾರೆ ಎನ್ನುವುದನ್ನು ಈ ಕಿರುಹೊತ್ತಗೆಯಲ್ಲಿರುವ ಚಿತ್ರಗಳಲ್ಲಿ ನೀವು ಗಮನಿಸಿರಬಹುದು. ವಸ್ತ್ರಾಲಂಕಾರಕ್ಕೆ ನಾವೇಕೆ ಅಷ್ಟು ಮಹತ್ವ ಕೊಡುತ್ತೇವೆ?



ಐಸ್‌ಲೆಂಡ್

**ದೇವರನ್ನು ಮಹಿಮೆಪಡಿಸಲು.** ದೇವರು ನಮ್ಮ ಹೊರಗಿನ ಶೃಂಗಾರವನ್ನಲ್ಲ ಒಳಗಿನ ವ್ಯಕ್ತಿತ್ವವನ್ನು ನೋಡುತ್ತಾನೆ. (1 ಸಮುವೇಲ 16:7) ಹಾಗಿದ್ದರೂ ಆರಾಧನೆಗೆಂದು ಸಭೆ ಸೇರುವಾಗ ನಾವು ವಸ್ತ್ರಾಲಂಕಾರಕ್ಕೆ ಹೆಚ್ಚು ಗಮನ ಕೊಡುತ್ತೇವೆ. ದೇವರಿಗೆ ಘನಮಾನ ಮತ್ತು ಸಹಆರಾಧಕರಿಗೆ ಗೌರವ ಕೊಡಬೇಕೆನ್ನುವುದೇ ನಮ್ಮ ಇಚ್ಛೆ. ಉದಾಹರಣೆಗೆ, ನ್ಯಾಯಾಧೀಶರನ್ನು ಭೇಟಿಯಾಗಬೇಕಿದೆ ಎಂದಿಟ್ಟುಕೊಳ್ಳಿ. ಅವರ ಮುಂದೆ ಹೋಗುವ ಮುನ್ನ ನಮ್ಮ ಬಟ್ಟೆ ಮತ್ತು ಹೊರತೋರಿಕೆ ಸಭ್ಯವಾಗಿದೆ ಎಂದು ಖಚಿತ ಮಾಡಿಕೊಳ್ಳುತ್ತೇವಲ್ಲವೇ? ಅದೇ ರೀತಿ ನಾವು ಸಭೆಗೆ ಹೋಗುವಾಗ "ಸರ್ವಲೋಕಕ್ಕೆ ನ್ಯಾಯತೀರಿಸುವ" ಯೆಹೋವ ದೇವರ ಮುಂದೆ ನಿಲ್ಲುತ್ತೇವೆ. ಹಾಗಾದರೆ ನಮ್ಮ ಉಡುಪು ಹೊರತೋರಿಕೆ ಸರ್ವಶಕ್ತ ದೇವರಿಗೆ ಘನಮಾನ ತರುವಂಥ ರೀತಿಯಲ್ಲಿ ಇರಬೇಕಲ್ಲವೇ?—ಆದಿಕಾಂಡ 18:25.



ಮೆಕ್ಸಿಕೊ

**ದೇವರ ಉನ್ನತ ಮಟ್ಟಗಳನ್ನು ಬದುಕಿನಲ್ಲಿ ಪಾಲಿಸುತ್ತೇವೆಂದು ತೋರಿಸಲು.** ಕ್ರೈಸ್ತರು "ಸಭ್ಯತೆ ಮತ್ತು ಸ್ವಸ್ಥಬುದ್ಧಿಯುಳ್ಳವರಾಗಿದ್ದು ಮರ್ಯಾದೆಗೆ ತಕ್ಕ" ಉಡುಪನ್ನು ಧರಿಸಬೇಕೆಂದು ಬೈಬಲ್ ಪ್ರೋತ್ಸಾಹಿಸುತ್ತದೆ. (1 ತಿಮೊಥೆಯ 2:9, 10) "ಸಭ್ಯ" ಉಡುಪು ಆಡಂಬರವಾಗಿರುವುದಿಲ್ಲ, ನೋಡುಗರಲ್ಲಿ ಲೈಂಗಿಕ ಭಾವವನ್ನು ಕೆರಳಿಸುವ ಪಾರದರ್ಶಕ ಅಥವಾ ಮೈತೋರಿಸುವ ರೀತಿಯಲ್ಲಿ ಇರುವುದಿಲ್ಲ. "ಸ್ವಸ್ಥಬುದ್ಧಿ" ಉಳ್ಳವರು ಟೈಟಾಗಿರುವ ಅಥವಾ ವಿಪರೀತ ಲೂಸಾಗಿರುವ ಉಡುಪನ್ನು ಆರಿಸಿಕೊಳ್ಳುವುದಿಲ್ಲ. ಯಾವ ರೀತಿಯ ಬಟ್ಟೆ ಧರಿಸಬೇಕು ಎನ್ನುವುದು ವ್ಯಕ್ತಿಪರ ಆಯ್ಕೆಯಾದರೂ 'ಸಭ್ಯತೆ' ಹಾಗೂ 'ಸ್ವಸ್ಥಬುದ್ಧಿ ಉಳ್ಳವರಾಗಿ' ಎನ್ನುವ ಎರಡು ತತ್ವಗಳನ್ನು ಯೆಹೋವನ ಸಾಕ್ಷಿಗಳು ಮರೆಯುವುದಿಲ್ಲ. ನಾವು ಧರಿಸುವ ಅಚ್ಚುಕಟ್ಟಾದ ಉಡುಪು "ನಮ್ಮ ರಕ್ಷಕನಾದ ದೇವರ ಬೋಧನೆ"ಗೆ ಅಲಂಕಾರದಂತಿದ್ದು ಆತನಿಗೆ ಮಹಿಮೆ ತರುತ್ತದೆ. (ತೀತ 2:10; 1 ಪೇತ್ರ 2:12) ಹೀಗೆ ನಮ್ಮ ಒಪ್ಪಓರಣದ ಉಡುಪು ಯೆಹೋವ ದೇವರ ಆರಾಧನೆಯ ಉನ್ನತ ಮಟ್ಟವನ್ನು ಇತರರಿಗೆ ಸಾರಿ ಹೇಳುತ್ತದೆ.



ಗಿನಿ-ಬಿಸೌ

'ನನ್ನತ್ರ ಒಳ್ಳೇ ಬಟ್ಟೆ ಇಲ್ಲ ನಾನು ಹೇಗೆ ಯೆಹೋವನ ಸಾಕ್ಷಿಗಳ ಸಭೆಗೆ ಹೋಗೋದು' ಎಂದು ನೆನಸಬೇಡಿ. ಸಭೆಗೆ ಹೋಗುವಾಗ ದುಬಾರಿ ಹಾಗೂ ಫ್ಯಾಷನ್‌ಯುಕ್ತ ವಸ್ತ್ರ ಧರಿಸಬೇಕೆಂದಿಲ್ಲ; ಶುಭ್ರವಾಗಿ ನೀಟಾಗಿದ್ದರೆ ಸಾಕು.

- ■ ಸಭೆಗೆ ಹೋಗುವಾಗ ನಾವೇಕೆ ಸಭ್ಯ ಉಡುಗೆ ಧರಿಸಬೇಕು?
- ■ ಉಡುಗೆ ತೊಡುಗೆ ವಿಷಯದಲ್ಲಿ ಯಾವೆರಡು ತತ್ವವನ್ನು ನಾವು ಮನಸ್ಸಿನಲ್ಲಿಡಬೇಕು?



ಫಿಲಿಪೀನ್ಸ್

9

# ಸಭಾ ಕೂಟಗಳ ಕಾರ್ಯಕ್ರಮಕ್ಕೆ ತಯಾರಿ ಮಾಡುವುದು ಹೇಗೆ?



ಕಾಂಬೋಡಿಯ



ಯುಕ್ರೇನ್



ಯೆಹೋವನ ಸಾಕ್ಷಿಗಳಿಂದ ಬೈಬಲ್ ವಿಷಯ ಕಲಿಯುತ್ತಿದ್ದೀರಾ? ಹಾಗಾದರೆ ಪ್ರತಿಬಾರಿ ಮುಂಚಿತವಾಗಿ ಓದಿ ತಯಾರಿ ಮಾಡುವ ಮಹತ್ವ ನಿಮಗೆ ಗೊತ್ತಿರಬಹುದು. ಸಭಾ ಕೂಟಗಳಲ್ಲಿ ತಿಳಿಸಲಾಗುವ ವಿಷಯಗಳನ್ನು ಸಹ ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾದರೆ ಪೂರ್ವತಯಾರಿ ಮಾಡಬೇಕು. ರೂಢಿ ಮಾಡಿಕೊಂಡರಂತೂ ಫಲಿತಾಂಶ ಅದ್ಭುತವಾಗಿರುತ್ತದೆ.

**ಸೂಕ್ತ ಸಮಯ ಹಾಗೂ ಪರಿಸರ ಆಯ್ಕೆ ಮಾಡಿ.** ಏಕಾಗ್ರತೆ ಕೊಟ್ಟು ಓದಲು ನಿಮ್ಮಿಂದ ಯಾವಾಗ ಸಾಧ್ಯ? ಬೆಳಿಗ್ಗೆ ಕೆಲಸ ಆರಂಭಿಸುವ ಮುಂಚೆ . . . ರಾತ್ರಿ ಮಕ್ಕಳು ನಿದ್ರಿಸಿದ ಮೇಲೆ . . . ? ತುಂಬಾ ಹೊತ್ತು ಓದಲು ನಿಮ್ಮಿಂದ ಆಗದಿದ್ದಲ್ಲಿ ಎಷ್ಟು ಹೊತ್ತು ವ್ಯಯಿಸಲು ಸಾಧ್ಯ ಎಂದು ನಿರ್ಧರಿಸಿ. ಆ ನಿಗದಿತ ಸಮಯವನ್ನು ಇತರ ಸಂಗತಿ ಕಸಿದುಕೊಳ್ಳದಂತೆ ನೋಡಿಕೊಳ್ಳಿ. ಓದಿಗೆ ಪ್ರಶಾಂತ ಜಾಗ ಆಯ್ಕೆ ಮಾಡಿ. ಟೀವಿ, ಮೊಬೈಲ್ ಇತ್ಯಾದಿಗಳನ್ನು ಬಂದ್ ಮಾಡಿ ಅಡಚಣೆ ತಪ್ಪಿಸಿ. ತಯಾರಿ ಆರಂಭಿಸುವ ಮುನ್ನ ದೇವರ ಬಳಿ ಪ್ರಾರ್ಥಿಸಿ. ಆಗ ಚಿಂತೆಗಳನ್ನೆಲ್ಲ ಬದಿಗಿಟ್ಟು ಬೈಬಲ್ ಕಲಿಕೆಯ ಮೇಲೆ ಮನಸ್ಸನ್ನು ಕೇಂದ್ರೀಕರಿಸಲು ಆಗುವುದು.—ಫಿಲಿಪ್ಪಿ 4:6, 7.

**ಓದಿ ಅಡಿಗೆರೆ ಹಾಕಿ, ಚರ್ಚೆಯಲ್ಲಿ ಭಾಗವಹಿಸಲು ಸಿದ್ಧತೆ ಮಾಡಿ.** ಮೊದಲು, ಓದುವ ವಿಷಯದ ಮೇಲ್ನೋಟ ಪಡೆದುಕೊಳ್ಳಿ. ಅದಕ್ಕಾಗಿ ಹೀಗೆ ಮಾಡಿ, ಲೇಖನದ ಅಥವಾ ಅಧ್ಯಾಯದ ಶೀರ್ಷಿಕೆಯನ್ನು ಮೊದಲು ಓದಿ. ಅದು ಲೇಖನದ ಮುಖ್ಯ ವಿಷಯ ಯಾವುದೆಂದು ಸೂಚಿಸುತ್ತದೆ. ನಂತರ ಪ್ರತಿಯೊಂದು ಉಪಶೀರ್ಷಿಕೆಯನ್ನು ಗಮನಿಸಿ. ಅವು ಮುಖ್ಯ ವಿಷಯಕ್ಕೆ ಹೇಗೆ ಸಂಬಂಧಿಸಿವೆ ಎಂದು ಆಲೋಚಿಸಿ. ಆಮೇಲೆ ಚಿತ್ರಗಳು ಹಾಗೂ ಪುನರವಲೋಕನ ಪ್ರಶ್ನೆಗಳನ್ನು ನೋಡಿ. ಅವು ಮುಖ್ಯ ವಿಷಯದ ಬಗ್ಗೆ ಹೇಗೆ ಇನ್ನಷ್ಟು ಸ್ಪಷ್ಟ ವಿವರ ನೀಡುತ್ತವೆ ಎಂದು ಚಿಂತಿಸಿ. ಅನಂತರ ಪ್ರತಿಯೊಂದು ಪ್ಯಾರಗ್ರಾಫ್ ಓದಿ ಅದರ ಕೆಳಗಿರುವ ಪ್ರಶ್ನೆಗೆ ಉತ್ತರ ಕಂಡು ಹಿಡಿಯಿರಿ. ಪ್ಯಾರಗ್ರಾಫ್‌ನಲ್ಲಿರುವ ಬೈಬಲ್ ವಚನಗಳನ್ನು ತೆರೆದು ಓದಿ. ಅವು ಪ್ಯಾರಗ್ರಾಫ್‌ನಲ್ಲಿರುವ ವಿಷಯದ ಬಗ್ಗೆ ಏನು ತಿಳಿಸುತ್ತವೆ ಎಂದು ಅವಲೋಕಿಸಿ. (ಅಪೊಸ್ತಲರ ಕಾರ್ಯಗಳು 17:11) ಉತ್ತರ ಕಂಡು ಹಿಡಿದ ಮೇಲೆ ಮುಖ್ಯ ಪದಗಳಿಗೆ ಅಥವಾ ವಾಕ್ಯಗಳಿಗೆ ಅಡಿಗೆರೆ ಹಾಕಿ. ಸಭಾ ಕೂಟದಲ್ಲಿ ಆ ಪದಗಳನ್ನು ನೋಡಿದ ಕೂಡಲೇ ಉತ್ತರವನ್ನು ನೆನಪಿಸಿಕೊಳ್ಳಲು ಸುಲಭವಾಗುತ್ತದೆ. ಚರ್ಚೆಯ ಸಮಯದಲ್ಲಿ ನೀವು ಸಹ ಕೈ ಎತ್ತಿ ಸ್ವಂತ ಮಾತಿನಲ್ಲಿ ಉತ್ತರ ಹೇಳಬಹುದು.

ಪ್ರತಿವಾರ ಸಭಾ ಕೂಟಗಳಲ್ಲಿ ಚರ್ಚಿಸಲಾಗುವ ವಿಭಿನ್ನ ವಿಷಯಗಳನ್ನು ಈ ರೀತಿ ಓದಿ ತಯಾರಿ ಮಾಡಿ. ಬೈಬಲಿನ ನಿಮ್ಮ ಜ್ಞಾನ ಭಂಡಾರ ಅಥವಾ "ಬೊಕ್ಕಸ" ಹೊಸ ವಿಷಯಗಳಿಂದ ಸಮೃದ್ಧಿಯಾಗಿ ಹಿಗ್ಗುವುದು.—ಮತ್ತಾಯ 13:51, 52.

- ಸಭಾ ಕೂಟಗಳಿಗೆ ತಯಾರಿ ಮಾಡುವ ರೂಢಿಯನ್ನು ಬೆಳೆಸಿಕೊಳ್ಳಲು ನೀವೇನು ಮಾಡಬೇಕು?
- ಸಭಾ ಕೂಟದಲ್ಲಿ ಉತ್ತರ ಹೇಳಲು ಹೇಗೆ ತಯಾರಿ ಮಾಡುವಿರಿ?

### ಇನ್ನಷ್ಟು ತಿಳಿಯಲು . . .

ಮೇಲೆ ತಿಳಿಸಿರುವ ವಿಧಾನ ಬಳಸಿ ಕಾವಲಿನಬುರುಜು ಅಧ್ಯಯನ ಹಾಗೂ ಸಭಾ ಬೈಬಲ್ ಅಧ್ಯಯನಕ್ಕೆ ತಯಾರಿ ಮಾಡಿ. ನಿಮ್ಮ ಬೈಬಲ್ ಟೀಚರ್ ಬಳಿ ನೆರವು ಪಡೆದು ಮುಂದಿನ ಸಭಾ ಕೂಟದಲ್ಲಿ ಉತ್ತರ ಹೇಳಲು ಪ್ರಯತ್ನಿಸಿ.



10

# ಕುಟುಂಬ ಆರಾಧನೆ ಅಂದರೇನು?


ದಕ್ಷಿಣ ಕೊರಿಯ

ಕುಟುಂಬ ಸದಸ್ಯರಲ್ಲಿ ಪ್ರೀತಿ ಐಕ್ಯತೆಯ ಬಾಂಧವ್ಯ ಇರಬೇಕು ಹಾಗೂ ಆಧ್ಯಾತ್ಮ ಸ್ಥಿತಿ ಚೆನ್ನಾಗಿರಬೇಕು ಎನ್ನುವುದು ಯೆಹೋವ ದೇವರ ಇಚ್ಛೆ. ಹಾಗಾಗಿ ಕುಟುಂಬ ಸದಸ್ಯರು ಒಟ್ಟಿಗೆ ಸಮಯ ಕಳೆಯಬೇಕೆಂದು ಆತನು ಅಗತ್ಯಪಡಿಸಿದನು. (ಧರ್ಮೋಪದೇಶಕಾಂಡ 6:6, 7) ಆ ಕಾರಣದಿಂದಲೇ ಯೆಹೋವನ ಸಾಕ್ಷಿಗಳು ವಾರದ ಒಂದು ದಿನ ನಿರ್ದಿಷ್ಟ ಸಮಯವನ್ನು ಕುಟುಂಬ ಆರಾಧನೆಗೆಂದು ಮೀಸಲಿಡುತ್ತಾರೆ. ಎಲ್ಲರೂ ಒಟ್ಟುಗೂಡಿ ಉಲ್ಲಾಸಮಯವಾಗಿ ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸುತ್ತಾರೆ. ನೀವು ಒಬ್ಬಂಟಿಯಾಗಿದ್ದರೂ ಇದೇ ರೀತಿ ನಿರ್ದಿಷ್ಟ ಸಮಯ ಮೀಸಲಿಟ್ಟು ಬೈಬಲನ್ನು ಆಳವಾಗಿ ತಿಳಿದುಕೊಳ್ಳಲು ಕಾರ್ಯಯೋಜನೆ ಹಾಕಿಕೊಳ್ಳಬಹುದು.


ಬ್ರೆಜಿಲ್

**ಯೆಹೋವ ದೇವರೊಂದಿಗೆ ಆಪ್ತರಾಗುವ ಸಮಯ.** “ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು.” (ಯಾಕೋಬ 4:8) ನಾವು ಯೆಹೋವ ದೇವರಿಗೆ ಸಮೀಪವಾಗಬೇಕಾದರೆ ಆತನ ಬಗ್ಗೆ ತಿಳಿದುಕೊಳ್ಳಬೇಕು. ಅದಕ್ಕೆ ಆತನ ವಾಕ್ಯವಾದ ಬೈಬಲನ್ನು ಓದುವುದು ಅಗತ್ಯ. ಅದರಲ್ಲಿ ಆತನ ವ್ಯಕ್ತಿತ್ವ ಹಾಗೂ ಕಾರ್ಯವೈಖರಿಯ ಬಗ್ಗೆ ಬೇಕಾದಷ್ಟು ವಿವರಗಳಿವೆ. ಬೈಬಲನ್ನು ಒಟ್ಟಿಗೆ ಓದುವುದು ಕುಟುಂಬ ಆರಾಧನೆಯನ್ನು ಆರಂಭಿಸುವ ಒಂದು ಸುಲಭ ವಿಧಾನ. ಜೀವನ ಮತ್ತು ಸೇವೆ ಕೂಟದ ಕಾರ್ಯತಖ್ತೆಯಲ್ಲಿ ಆಯಾ ವಾರಕ್ಕೆ ಬೈಬಲಿನ ಇಂತಿಷ್ಟು ಅಧ್ಯಾಯಗಳನ್ನು ನಿಗದಿಸಲಾಗಿರುತ್ತದೆ. ಆ ಅಧ್ಯಾಯಗಳನ್ನೇ ನೀವು ಕುಟುಂಬವಾಗಿ ಓದಬಹುದು. ಓದುವಿಕೆಯಲ್ಲಿ ಎಲ್ಲರೂ ಭಾಗ ತೆಗೆದುಕೊಳ್ಳಬಹುದು. ನಂತರ ಅವುಗಳಲ್ಲಿರುವ ಪಾಠಗಳನ್ನು ಪ್ರತಿಯೊಬ್ಬರು ಹಂಚಿಕೊಳ್ಳಬಹುದು.


ಆಸ್ಟ್ರೇಲಿಯ

**ಕುಟುಂಬ ಸದಸ್ಯರು ಪರಸ್ಪರ ಆಪ್ತರಾಗುವ ಸಮಯ.** ಕುಟುಂಬವಾಗಿ ಬೈಬಲನ್ನು ಓದುವಾಗ ಪತಿ-ಪತ್ನಿ, ಪೋಷಕರು-ಮಕ್ಕಳ ನಡುವೆ ಪ್ರೀತಿ ಹೆಚ್ಚಿ ಸಂಬಂಧ ಬಿಗಿಯಾಗುತ್ತದೆ. ಕುಟುಂಬ ಆರಾಧನೆಯ ಸಮಯ ಉಲ್ಲಾಸವಾಗಿ ಇರಬೇಕು, ಕುಟುಂಬದ ಪ್ರತಿ ಸದಸ್ಯರು ಆ ಸಮಯಕ್ಕಾಗಿ ಮುನ್ನೋಡುವಂತೆ ಇರಬೇಕು. ಹಾಗಿರಬೇಕೆಂದರೆ ಹೆತ್ತವರು ತಮ್ಮ ಮಕ್ಕಳ ವಯೋಮಿತಿಗೆ ತಕ್ಕ ಹಾಗೂ ಅವರಿಗೆ ನೆರವಾಗುವ ವಿಚಾರಗಳನ್ನು ಚರ್ಚಿಸಬೇಕು. ಅಂಥ ವಿಚಾರಗಳು ನಿಮಗೆ *ಕಾವಲಿನಬುರುಜು* ಮತ್ತು *ಎಚ್ಚರ!* ಪತ್ರಿಕೆಯಲ್ಲಿ ಅಥವಾ ನಮ್ಮ jw.org ವೆಬ್‌ಸೈಟಿನಲ್ಲಿ ಸಿಗುತ್ತವೆ. ಮಕ್ಕಳಿಗೆ ಶಾಲೆಯಲ್ಲಿ ಸಮಸ್ಯೆಗಳಿವೆಯೋ ಎಂದು ಕೇಳಿ ತಿಳಿದು ಅವನ್ನು ನಿವಾರಿಸುವುದು ಹೇಗೆಂದು ತಿಳಿಸಿ. ಅದಕ್ಕಾಗಿ JW ಪ್ರಸಾರದಲ್ಲಿ (tv.jw.org) ಬರುವ ಕಾರ್ಯಕ್ರಮವನ್ನು ನೋಡಿ, ಕುಟುಂಬವಾಗಿ ಚರ್ಚಿಸಿ. ಸಭಾ ಕೂಟಗಳಲ್ಲಿ ಹಾಡಲಾಗುವ ಸ್ತುತಿಗೀತೆಗಳನ್ನು ಪ್ರ್ಯಾಕ್ಟಿಸ್ ಮಾಡುವುದು ಮತ್ತು ಕೊನೆಗೆ ತಿಂಡಿತಿನಿಸುಗಳನ್ನು ಸವಿಯುವುದು ಎಲ್ಲರಲ್ಲೂ ಹರ್ಷಾನಂದ ಹೆಚ್ಚಿಸುತ್ತದೆ.


ಗಿನಿ

ಹೀಗೆ ಪ್ರತಿವಾರ ಕುಟುಂಬ ಆರಾಧನೆ ಮಾಡಿ ಯೆಹೋವ ದೇವರನ್ನು ಸ್ತುತಿಸಿ. ಬೈಬಲ್ ವಿಷಯಗಳನ್ನು ಕಲಿತು ಹರ್ಷಾನಂದ ಕಂಡುಕೊಳ್ಳಲು ಇದು ಕುಟುಂಬಕ್ಕೆ ಸುಸಮಯ ಒದಗಿಸುತ್ತದೆ. ಕುಟುಂಬ ಆರಾಧನೆಯನ್ನು ತಪ್ಪದೆ ಮಾಡಲು ನೀವು ಹಾಕುವ ಶ್ರಮವನ್ನು ದೇವರು ನಿಸ್ಸಂದೇಹವಾಗಿ ಆಶೀರ್ವದಿಸುತ್ತಾನೆ.—ಕೀರ್ತನೆ 1:1-3.

- ನಾವೇಕೆ ಕುಟುಂಬ ಆರಾಧನೆಗೆ ಸಮಯ ಮೀಸಲಿಡುತ್ತೇವೆ?
- ಕುಟುಂಬ ಆರಾಧನೆ ಆನಂದಮಯ ಆಗಿರಲು ಹೆತ್ತವರು ಏನು ಮಾಡಬೇಕು?

### ಇನ್ನಷ್ಟು ತಿಳಿಯಲು . . .

ಸಭೆಗೆ ಬರುವ ಇತರರು ತಮ್ಮ ಕುಟುಂಬ ಆರಾಧನೆಯಲ್ಲಿ ಏನೆಲ್ಲಾ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆ ಎಂದು ಕೇಳಿ. ನಿಮ್ಮ ಮಕ್ಕಳಿಗೆ ಯೆಹೋವ ದೇವರ ಬಗ್ಗೆ ಕಲಿಸಲು ರಾಜ್ಯ ಸಭಾಗೃಹದಲ್ಲಿ ಯಾವ ಪುಸ್ತಕಗಳು ಸಿಗುತ್ತವೆಂದು ವಿಚಾರಿಸಿ.



11



ಮೆಕ್ಸಿಕೊ

ಜರ್ಮನಿ

# ನಾವು ಸಮ್ಮೇಳನಗಳನ್ನು ಆಯೋಜಿಸುವ ಉದ್ದೇಶವೇನು?

ಈ ಚಿತ್ರಗಳಲ್ಲಿರುವ ಜನರ ಮುಖ ಸಂತೋಷದಿಂದ ಅರಳಿರುವುದನ್ನು ಗಮನಿಸಿದಿರಾ? ಅವರೆಲ್ಲರೂ ಸಮ್ಮೇಳನಕ್ಕೆ ಹಾಜರಾಗಿ ಆನಂದಿಸುತ್ತಿದ್ದಾರೆ. ಪ್ರಾಚೀನ ಕಾಲದ ದೇವ ಭಕ್ತರು ವರ್ಷಕ್ಕೆ ಮೂರು ಸಲ ಸಮೂಹವಾಗಿ ಕೂಡಿಬರುತ್ತಿದ್ದರು. ಅದು ದೇವರ ಆಜ್ಞೆಯಾಗಿತ್ತು. (ಧರ್ಮೋಪದೇಶಕಾಂಡ 16:16) ಅದೇ ನಮೂನೆಯನ್ನು ನಾವು ಅನುಕರಿಸುತ್ತೇವೆ. ಪ್ರತಿ ವರ್ಷ ನಮಗೆ ಮೂರು ದಿನದ ***ಪ್ರಾದೇಶಿಕ ಅಧಿವೇಶನ*** ಮತ್ತು ಒಂದೊಂದು ದಿನದ ಎರಡು ***ಸಮ್ಮೇಳನಗಳು*** ಇವೆ. ಅವುಗಳ ಪ್ರಯೋಜನವೇನು?

**ನಮ್ಮಲ್ಲಿ ಭಾವೈಕ್ಯ ಹೆಚ್ಚಿ ಸಹೋದರತ್ವ ಬಲಗೊಳ್ಳುತ್ತದೆ.** ಪ್ರಾಚೀನ ಕಾಲದ ಇಸ್ರೇಲ್ ಜನರು, "ಕೂಡಿದ ಸಭೆಗಳಲ್ಲಿ" ಯೆಹೋವ ದೇವರನ್ನು ಮಹಿಮೆಪಡಿಸುತ್ತಾ ಆನಂದಿಸಿದರು. ನಾವು ಸಮ್ಮೇಳನಗಳಲ್ಲಿ ಒಟ್ಟಾಗಿ ಕೂಡಿ ಯೆಹೋವ ದೇವರನ್ನು ಆರಾಧಿಸಿ ಹರ್ಷಿಸುತ್ತೇವೆ. (ಕೀರ್ತನೆ 26:12; 111:1) ಇಂಥ ಸಮ್ಮೇಳನಗಳಿಗೆ ಬೇರೆ ಬೇರೆ ಊರುಗಳಿಂದ ಕೆಲವೊಮ್ಮೆ ದೂರದ ದೇಶಗಳಿಂದ ಯೆಹೋವನ ಸಾಕ್ಷಿಗಳು ಜೊತೆಸೇರುತ್ತಾರೆ. ಪರಸ್ಪರ ಒಡನಾಟ ಸಾಹಚರ್ಯದಲ್ಲಿ ಆನಂದಿಸಲು ಇದೊಂದು ಸುಸಂದರ್ಭ. ಮಧ್ಯಾಹ್ನ ಊಟದ ವೇಳೆಯಲ್ಲಂತೂ ಸಮ್ಮೇಳನದಲ್ಲಿ ಸ್ನೇಹಮಯ ವಾತಾವರಣವೇ ತುಂಬಿರುತ್ತದೆ. (ಅಪೊಸ್ತಲರ ಕಾರ್ಯಗಳು 2:42) ನಮ್ಮ "ಸಹೋದರರ ಇಡೀ ಬಳಗ" ಪ್ರೀತಿ ಭಾವೈಕ್ಯದಲ್ಲಿ ಒಟ್ಟುಗೂಡಿ ಆನಂದಿಸುತ್ತಿರುವುದನ್ನು ಸಮ್ಮೇಳನಗಳಲ್ಲಿ ಪ್ರತ್ಯಕ್ಷ ಕಾಣುವಿರಿ.—1 ಪೇತ್ರ 2:17.



ಬೋಟ್ಸವಾನ

**ಆಧ್ಯಾತ್ಮಿಕ ಜ್ಞಾನ ಹೆಚ್ಚಿಸಿಕೊಳ್ಳಲು ನೆರವಾಗುತ್ತವೆ.** ಪ್ರಾಚೀನ ಕಾಲದಲ್ಲಿ, ಸಮೂಹವಾಗಿ ಕೂಡಿಬಂದ ಇಸ್ರೇಲ್ ಜನರು ಶಾಸ್ತ್ರವಚನಗಳ ಅರ್ಥವನ್ನು ಗ್ರಹಿಸಿ ಬಹಳ ಪ್ರಯೋಜನ ಪಡೆದರು. (ನೆಹೆಮೀಯ 8:8, 12) ನಮ್ಮ ಸಮ್ಮೇಳನಗಳಲ್ಲಿ ಸಹ ಬೈಬಲ್ ಉಪದೇಶ ನೀಡಲಾಗುತ್ತದೆ. ಸಮ್ಮೇಳನದ ಇಡೀ ಕಾರ್ಯಕ್ರಮ ಬೈಬಲಿನ ಒಂದು ವಿಷಯದ ಮೇಲೆ ಹೆಣೆದುಕೊಂಡಿರುತ್ತದೆ. ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾಗುವ ಕುತೂಹಲಕಾರಿ ಭಾಷಣಗಳು, ಪ್ರಾತ್ಯಕ್ಷಿಕೆಗಳು ದೇವರ ಇಷ್ಟದಂತೆ ನಡೆಯುವುದು ಹೇಗೆಂದು ಕಲಿಸುತ್ತವೆ. ದೇವಭಕ್ತ ಜೀವನವನ್ನು ನಡೆಸುವಾಗ ಎದುರಾಗುವ ಸವಾಲು ಕಷ್ಟಗಳನ್ನು ಜಯಿಸಿ ಬಂದವರ ಸಂದರ್ಶನಗಳಿರುತ್ತೆ. ಅವು ನಮಗೆ ಸ್ಫೂರ್ತಿ ಪ್ರೋತ್ಸಾಹ ನೀಡುತ್ತವೆ. ಪ್ರಾದೇಶಿಕ ಅಧಿವೇಶನದಲ್ಲಿ ಬೈಬಲ್ ಕಥೆಯನ್ನು ಆಧರಿಸಿದ ನಾಟಕ ಪ್ರದರ್ಶನ ಇರುತ್ತದೆ. ಅದು ನಮ್ಮ ಬದುಕಿಗೆ ನೆರವಾಗುವ ಪಾಠವನ್ನು ಚೆನ್ನಾಗಿ ಬಿಂಬಿಸುತ್ತದೆ. ಬದುಕನ್ನು ದೇವರ ಸೇವೆಗೆಂದು ಸಮರ್ಪಿಸುವವರ ದೀಕ್ಷಾಸ್ನಾನ ಪ್ರತಿ ಸಮ್ಮೇಳನದ ಒಂದು ವೈಶಿಷ್ಟ್ಯ.



ನಿಕರಾಗ್ವ



ಇಟಲಿ

- ಸಮ್ಮೇಳನಗಳು ಸಂಭ್ರಮ ಸಡಗರದ ಸಮಾರಂಭವಾಗಿವೆ ಏಕೆ?
- ಸಮ್ಮೇಳನಕ್ಕೆ ಬರುವುದರಿಂದ ನಿಮಗೇನು ಪ್ರಯೋಜನ?

### ಇನ್ನಷ್ಟು ತಿಳಿಯಲು . . .

ನಮ್ಮ ಸಹೋದರ ಬಳಗದ ಪರಿಚಯ ಮಾಡಿಕೊಳ್ಳಲು ನಮ್ಮ ಸಮ್ಮೇಳನಕ್ಕೆ ಹಾಜರಾಗಿ. ಸಮ್ಮೇಳನ ಹೇಗಿರುತ್ತದೆ ಎಂದು ನಸುನೋಟ ಪಡೆಯಲು ಒಂದು ಸಮ್ಮೇಳನ ಕಾರ್ಯಕ್ರಮ ವಿವರ ಪಟ್ಟಿಯನ್ನು ನೋಡಬಹುದು. ನಿಮ್ಮ ಬೈಬಲ್ ಟೀಚರ್ ನಿಮಗದನ್ನು ತೋರಿಸುವರು. ಮುಂದಿನ ಸಮ್ಮೇಳನ ಎಲ್ಲಿ ಯಾವಾಗ ಇದೆ ಎನ್ನುವುದನ್ನು ಕ್ಯಾಲೆಂಡರ್‌ನಲ್ಲಿ ಗುರುತಿಸಿಕೊಂಡು ಹಾಜರಾಗಲು ಪ್ರಯತ್ನಿಸಿ.

# ಸುವಾರ್ತೆ ಸಾರುವ ಕೆಲಸವನ್ನು ಹೇಗೆ ಮಾಡುತ್ತೇವೆ?

ಯೇಸು ಸಾವನ್ನಪ್ಪುವ ಕೆಲವು ದಿನಗಳ ಮುಂಚೆ ಒಂದು ಭವಿಷ್ಯ ನುಡಿದನು. “[ದೇವರ ರಾಜ್ಯದ] ಸುವಾರ್ತೆಯು ನಿವಾಸಿತ ಭೂಮಿಯಾದ್ಯಂತ ಎಲ್ಲ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲ್ಪಡುವುದು; ಮತ್ತು ಆಗ ಅಂತ್ಯವು ಬರುವುದು” ಎಂದು ತಿಳಿಸಿದನು. (ಮತ್ತಾಯ 24:14) ಯೇಸು ಭವಿಷ್ಯನುಡಿದಂತೆ ಇಂದು ಭೂಮಿಯಾದ್ಯಂತ ಇರುವ ಜನರಿಗೆ ಸುವಾರ್ತೆ ಸಾರಲಾಗುತ್ತಿದೆ. ಅಷ್ಟು ವ್ಯಾಪಕವಾಗಿ ಸುವಾರ್ತೆ ಸಾರಲು ಸಾಧ್ಯವಾಗಿರುವುದು ಹೇಗೆ? ಯೇಸು ಇಟ್ಟಿರುವ ನಮೂನೆಯನ್ನು ಅನುಕರಿಸುವುದರಿಂದ.—ಲೂಕ 8:1.

**ಮನೆಮನೆಗೆ ಹೋಗಿ ಸುವಾರ್ತೆ ಸಾರುತ್ತೇವೆ.** ಮನೆಮನೆಗೆ ಹೋಗಿ ಸುವಾರ್ತೆ ಸಾರುವಂತೆ ಯೇಸು ಶಿಷ್ಯರಿಗೆ ತರಬೇತಿ ನೀಡಿದನು. (ಮತ್ತಾಯ 10:11-13; ಅಪೊಸ್ತಲರ ಕಾರ್ಯಗಳು 5:42; 20:20) ಸುವಾರ್ತೆ ಸಾರಲು ಆ ಶಿಷ್ಯರಿಗೆ ನಿರ್ದಿಷ್ಟ ಪ್ರದೇಶಗಳನ್ನು ನಿಯೋಜಿಸಲಾಗಿತ್ತು. (ಮತ್ತಾಯ 10:5, 6; 2 ಕೊರಿಂಥ 10:13) ತದ್ರೀತಿಯಲ್ಲಿ ಇಂದು ಸಹ ಸುವಾರ್ತೆ ಸಾರುವ ಕೆಲಸವನ್ನು ಕ್ರಮಬದ್ಧವಾಗಿ ಏರ್ಪಡಿಸಲಾಗಿದೆ. ಸುವಾರ್ತೆ ಸಾರುವುದಕ್ಕಾಗಿ ಒಂದೊಂದು ಸಭೆಗೂ ಇಂತಿಷ್ಟು ಪ್ರದೇಶಗಳೆಂದು ನಿಯೋಜಿಸಲಾಗಿದೆ. ಯೇಸು ನೀಡಿದ ಆಜ್ಞೆಯಂತೆ ಜನರಿಗೆ ಕೂಲಂಕಷ ಸಾಕ್ಷಿ ನೀಡಲು ಇದರಿಂದ ಸಾಧ್ಯವಾಗುತ್ತಿದೆ.—ಅಪೊಸ್ತಲರ ಕಾರ್ಯಗಳು 10:42.

**ಸುವಾರ್ತೆ ಸಾರಲು ಬೇರೆ ಸಂದರ್ಭಗಳನ್ನೂ ಹುಡುಕುತ್ತೇವೆ.** ಯೇಸು ಸಮುದ್ರ ತೀರದಲ್ಲಿ, ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಸುವಾರ್ತೆ ಸಾರಿದನು. (ಮಾರ್ಕ 4:1; ಯೋಹಾನ 4:5-15) ನಾವು ಸಹ ಆತನ ಮಾದರಿಯನ್ನು ಅನುಸರಿಸುತ್ತಿದ್ದೇವೆ. ಮಾರ್ಕೆಟ್ ಮುಂತಾದ ವಾಣಿಜ್ಯ ಪ್ರದೇಶಗಳಲ್ಲಿ, ಜನನಿಬಿಡ ರಸ್ತೆಗಳಲ್ಲಿ, ಪಾರ್ಕ್‌ಗಳಲ್ಲಿ, ಟೆಲಿಫೋನ್ ಮುಖಾಂತರ ಹೀಗೆ ಎಲ್ಲಾ ಜನರಿಗೆ ಸುವಾರ್ತೆ ತಿಳಿಸಲು ಪ್ರಯತ್ನಿಸುತ್ತೇವೆ. ನೆರೆಹೊರೆಯವರಿಗೆ, ಸಹಪಾಠಿಗಳಿಗೆ, ಸಹಕಾರ್ಮಿಕರಿಗೆ, ಬಂಧುಮಿತ್ರರಿಗೆ ದೇವರ ರಾಜ್ಯದ ಕುರಿತು ಸುವಾರ್ತೆ ತಿಳಿಸುತ್ತೇವೆ. ನಮ್ಮ ಈ ಎಲ್ಲಾ ಪ್ರಯತ್ನಗಳಿಂದ ಭೂವ್ಯಾಪಕವಾಗಿ ಲಕ್ಷಗಟ್ಟಲೆ ಜನರಿಗೆ “ರಕ್ಷಣೆಯ” ಸಂದೇಶ ತಲುಪುತ್ತಿದೆ.—ಕೀರ್ತನೆ 96:2.

ಮಾನವರಿಗೆ ಭವ್ಯ ಭವಿಷ್ಯ ಕಲ್ಪಿಸಿಕೊಡುವ ದೇವರ ರಾಜ್ಯದ ಕುರಿತ ಶುಭ ವಾರ್ತೆ ಇಂದು ಎಲ್ಲರಿಗೂ ತಲುಪುವುದು ಜರೂರಿ. ಜೀವರಕ್ಷಕ ಸಂದೇಶವನ್ನು ಬೇರೆಯವರಿಗೆ ತಿಳಿಸುವುದು ನಮ್ಮ ಹೊಣೆ. ನೀವು ಯಾರಿಗೆ ತಿಳಿಸಲು ಕಾತುರರಾಗಿದ್ದೀರಿ?

- ಇಂದು ಮಾನವರಿಗೆ ಯಾವುದರ ಕುರಿತ “ಸುವಾರ್ತೆ” ಜರೂರಿಯಾಗಿದೆ?
- ಯೇಸುವಿನ ಮಾದರಿಯನ್ನು ಇಂದು ಯೆಹೋವನ ಸಾಕ್ಷಿಗಳು ಹೇಗೆ ಅನುಕರಿಸುತ್ತಿದ್ದಾರೆ?



ಸ್ಪೇನ್



ಬೆಲರೂಸ್

ಹಾಂಗ್‌ಕಾಂಗ್



ಪೆರು

**ಇನ್ನಷ್ಟು ತಿಳಿಯಲು . . .**

ಬೈಬಲಿನಲ್ಲಿ ನೀವು ಕಲಿತಿರುವ ವಿಷಯವನ್ನು ಬೇರೆಯವರಿಗೆ ತಿಳಿಸುವುದು ಹೇಗೆಂದು ತೋರಿಸುವಂತೆ ನಿಮ್ಮ ಬೈಬಲ್ ಟೀಚರನ್ನು ಕೇಳಿ.



13



ಕೆನಡ

# ಪಯನೀಯರ್ ಸೇವೆ ಅಂದರೇನು?

ಹಿಂದೆ ಬರುವವರಿಗೆ ದಾರಿ ರಚಿಸಿ ಕೊಡಲು ಮುಂದೆ ಹೋಗುವ ವ್ಯಕ್ತಿಯನ್ನು "ಪಯನೀಯರ್" ಎಂದು ಕರೆಯುತ್ತಾರೆ. ಒಂದರ್ಥದಲ್ಲಿ ಯೇಸುವನ್ನು ಸಹ ಪಯನೀಯರ್ ಎಂದು ಹೇಳಬಹುದು. ರಕ್ಷಣೆಯ ಮಾರ್ಗ ಯಾವುದೆಂದು ಮಾನವರಿಗೆ ಸ್ಪಷ್ಟವಾಗಿ ತೋರಿಸಲು ಅವನು ಭೂಮಿಗೆ ಬಂದು ದೇವರ ಸೇವೆ ಆರಂಭಿಸಿದನು. (ಮತ್ತಾಯ 20:28) ಆತನ ಮಾದರಿಯನ್ನು ಅನುಸರಿಸುತ್ತಾ ಇಂದು ಅನೇಕರು 'ಶಿಷ್ಯರನ್ನಾಗಿ ಮಾಡುವ' ಕೆಲಸದಲ್ಲಿ ಬಹಳ ಸಮಯ ವ್ಯಯಿಸುತ್ತಿದ್ದಾರೆ. (ಮತ್ತಾಯ 28:19, 20) ಇನ್ನು ಕೆಲವರು ದೇವರ ಸೇವೆಗೆ ತಮ್ಮ ಹೆಚ್ಚಿನ ಸಮಯ ಶಕ್ತಿಯನ್ನು ಮುಡಿಪಾಗಿಟ್ಟಿದ್ದಾರೆ. ಅವರನ್ನು ಪಯನೀಯರ್ ಎಂದು ಕರೆಯುತ್ತೇವೆ.



*ಮನೆಮನೆ ಸೇವೆ*

**ಪಯನೀಯರ್ ಸೇವೆ ಮಾಡುವವರು ಸುವಾರ್ತೆ ಸಾರಲು ಹೆಚ್ಚು ಸಮಯ ವ್ಯಯಿಸುತ್ತಾರೆ.** ಯೆಹೋವನ ಸಾಕ್ಷಿಗಳೆಲ್ಲರೂ ಸುವಾರ್ತೆಯ ಪ್ರಚಾರಕರಾಗಿದ್ದಾರೆ. ಆದರೆ ಅವರಲ್ಲಿ ಕೆಲವರು ***ಪಯನೀಯರರಾಗಿ, ವಿಶೇಷ ಪಯನೀಯರರಾಗಿ*** ಮತ್ತು ***ಸಹಾಯಕ ಪಯನೀಯರರಾಗಿ*** ಸೇವೆ ಸಲ್ಲಿಸುತ್ತಾರೆ. ಪ್ರತಿ ತಿಂಗಳು 70 ತಾಸುಗಳನ್ನು ಸುವಾರ್ತೆ ಸಾರುವ ಕಾರ್ಯದಲ್ಲಿ ವ್ಯಯಿಸುವವರನ್ನು ***ಪಯನೀಯರ್*** ಎಂದು ಕರೆಯುತ್ತಾರೆ. ದೇವರ ಸೇವೆಯಲ್ಲಿ ಅಷ್ಟು ತಾಸುಗಳನ್ನು ವ್ಯಯಿಸುವ ಸಲುವಾಗಿ ಅವರಲ್ಲಿ ಅನೇಕರು ಪೂರ್ಣಕಾಲಿಕ ಕೆಲಸದ ಬದಲು ಅರೆಕಾಲಿಕ ಕೆಲಸ ಮಾಡುತ್ತಾರೆ. ಸುವಾರ್ತೆ ಸಾರಲು ಪ್ರಚಾರಕರ ಆವಶ್ಯಕತೆ ಇರುವ ಕಡೆಗಳಲ್ಲಿ ***ವಿಶೇಷ ಪಯನೀಯರ್*** ಅನ್ನು ನೇಮಿಸಲಾಗುತ್ತದೆ. ಅವರು ಪ್ರತಿ ತಿಂಗಳು 130 ಕ್ಕಿಂತ ಹೆಚ್ಚಿನ ತಾಸುಗಳನ್ನು ಸುವಾರ್ತೆ ಸಾರುವ ಕೆಲಸದಲ್ಲಿ ವ್ಯಯಿಸುತ್ತಾರೆ. ಪಯನೀಯರ್ ಸೇವೆ ಮಾಡುವವರು ಯೆಹೋವ ದೇವರ ಮೇಲೆ ಭಾರ ಹಾಕಿ ಸರಳ ಜೀವನ ನಡೆಸುತ್ತಾ ಆತನ ಸೇವೆಗೆ ಆದ್ಯತೆ ನೀಡುತ್ತಾರೆ. (ಮತ್ತಾಯ 6:31-33; 1 ತಿಮೊಥೆಯ 6:6-8) ದೇವರ ಸೇವೆಯಲ್ಲಿ ತಿಂಗಳೊಂದಕ್ಕೆ 70 ತಾಸು ವ್ಯಯಿಸಲು ಆಗದವರು ***ಸಹಾಯಕ ಪಯನೀಯರ್*** ಸೇವೆ ಮಾಡಬಹುದು. ಅವರು ತಿಂಗಳೊಂದಕ್ಕೆ 30 ಅಥವಾ 50 ತಾಸು ವ್ಯಯಿಸಬಹುದು.



*ಬೈಬಲ್ ಕಲಿಕೆ*

**ಪಯನೀಯರ್ ಸೇವೆ ಮಾಡುವವರು ದೇವರ ಮೇಲೆ ಹಾಗೂ ಜನರ ಮೇಲೆ ಆಳವಾದ ಪ್ರೀತಿ ಇಟ್ಟಿರುತ್ತಾರೆ.** ದೇವರ ಬಗ್ಗೆ ಆತನ ಇಷ್ಟದ ಬಗ್ಗೆ ಏನೂ ಅರಿಯದ ಜನರಿಗೆ ಯೇಸು ಸಹಾಯ ಮಾಡಿದನು. (ಮಾರ್ಕ 6:34) ಅದೇ ರೀತಿ ಆಧ್ಯಾತ್ಮಿಕವಾಗಿ ಅಂಧಕಾರದಲ್ಲಿರುವ ಜನರಿಗೆ ನಾವು ಸಹ ಸಹಾಯ ಮಾಡುತ್ತೇವೆ. ಈಗಲೂ ಭವಿಷ್ಯದಲ್ಲೂ ಅವರಿಗೆ ಪ್ರಯೋಜನ ತರಬಲ್ಲ ಬೈಬಲ್ ಜ್ಞಾನವನ್ನು ಹಂಚಿಕೊಳ್ಳುತ್ತೇವೆ. ಪಯನೀಯರರು ತಮ್ಮ ಸಮಯ ಹಾಗೂ ಶಕ್ತಿಯನ್ನು ಧಾರಾಳವಾಗಿ ಉಪಯೋಗಿಸಿ ದೇವರ ಬಗ್ಗೆ ಜನರಿಗೆ ತಿಳಿಸಲು ಕಾರಣ ಅವರ ಮೇಲಿರುವ ಪ್ರೀತಿ. (ಮತ್ತಾಯ 22:39; 1 ಥೆಸಲೊನೀಕ 2:8) ಪಯನೀಯರ್ ಸೇವೆ ಮಾಡುವವರಿಗೆ ದೇವರ ಮೇಲೆ ಹೆಚ್ಚು ನಂಬಿಕೆ ವಿಶ್ವಾಸ ಇರುತ್ತದೆ. ಅವರು ದೇವರಿಗೆ ಆಪ್ತರಾಗಿರುತ್ತಾರೆ. ಬದುಕಿನಲ್ಲಿ ಸಂತೋಷ ನೆಮ್ಮದಿ ಕಾಣುತ್ತಾರೆ.—ಅಪೊಸ್ತಲರ ಕಾರ್ಯಗಳು 20:35.



*ವ್ಯಕ್ತಿಗತ ಕಲಿಕೆ*

- ಪಯನೀಯರ್ ಸೇವೆ ಅಂದರೇನು? ವಿವರಿಸಿ.
- ಪಯನೀಯರರು ತಮ್ಮನ್ನು ಪೂರ್ತಿಯಾಗಿ ದೇವರ ಸೇವೆಗೆ ಅರ್ಪಿಸಿಕೊಳ್ಳಲು ಕಾರಣವೇನು?

# ಪಯನೀಯರರಿಗಾಗಿ ಯಾವೆಲ್ಲ ಶಾಲೆಗಳಿವೆ?



ಅಮೆರಿಕ

ಅನೇಕ ವರ್ಷಗಳಿಂದಲೂ ದೇವಪ್ರಭುತ್ವಾತ್ಮಕ ಶಿಕ್ಷಣ ಯೆಹೋವನ ಸಾಕ್ಷಿಗಳ ಒಂದು ವೈಶಿಷ್ಟ್ಯತೆಯಾಗಿದೆ. 'ತಮ್ಮ ಶುಶ್ರೂಷೆಯನ್ನು ಪೂರ್ಣವಾಗಿ ನೆರವೇರಿಸಲಿಕ್ಕಾಗಿ' ಯಾರು ತಮ್ಮನ್ನು ಸುವಾರ್ತೆ ಸಾರುವ ಕೆಲಸದಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುತ್ತಾರೋ ಅವರಿಗೆ ವಿಶೇಷ ತರಬೇತಿ ಕೊಡಲಾಗುತ್ತದೆ.—2 ತಿಮೊಥೆಯ 4:5.

**ಪಯನೀಯರ್ ಸೇವಾ ಶಾಲೆ:** ಒಬ್ಬ ಪಯನೀಯರ್ ಒಂದು ವರ್ಷದ ಸೇವೆಯನ್ನು ಪೂರ್ತಿಗೊಳಿಸಿದಾಗ ಪಯನೀಯರ್ ಸೇವಾ ಶಾಲೆಗೆ ಸೇರ್ಪಡೆಯಾಗುವ ಅವಕಾಶ ದೊರೆಯುತ್ತದೆ. ಅದು ಆರು ದಿನಗಳ ತರಬೇತಿ. ಹತ್ತಿರದ ರಾಜ್ಯಸಭಾಗೃಹದಲ್ಲಿ ನಡೆಯುತ್ತದೆ. ಈ ಶಾಲೆ ಪಯನೀಯರರು ಯೆಹೋವನಿಗೆ ಹೆಚ್ಚು ಆಪ್ತರಾಗಲು, ಸುವಾರ್ತೆ ಸಾರುವ ಬೇರೆ ಬೇರೆ ವಿಧಾನಗಳಲ್ಲಿ ನಿಪುಣರಾಗಲು, ನಂಬಿಗಸ್ತಿಕೆಯಿಂದ ಮಾಡುತ್ತಿರುವ ಸೇವೆಯನ್ನು ಮುಂದುವರಿಸಲು ನೆರವಾಗುತ್ತದೆ.



ಗಿಲ್ಯಡ್ ಶಾಲೆ, ಪ್ಯಾಟರ್ಸನ್, ನ್ಯೂಯಾರ್ಕ್

**ರಾಜ್ಯ ಸೌವಾರ್ತಿಕರಿಗಾಗಿ ಶಾಲೆ:** ಈ ಶಾಲೆಯ ಅವಧಿ ಎರಡು ತಿಂಗಳು. ಈ ಶಾಲೆಯು, ತಮ್ಮ ಊರನ್ನು ಬಿಟ್ಟು ಅಗತ್ಯವಿರುವಲ್ಲಿ ಹೋಗಿ ಸೇವೆಮಾಡಲು ಸಿದ್ಧರಿರುವ ಅನುಭವಸ್ಥ ಪಯನೀಯರರಿಗೆ ತರಬೇತಿ ಕೊಡುತ್ತದೆ. ಇವರು ಈ ಭೂಮಿಯಲ್ಲಿ ಜೀವಿಸಿದ ಮಹಾ ಸೌವಾರ್ತಿಕನಾದ ಯೇಸು ಕ್ರಿಸ್ತನನ್ನು ಅನುಕರಿಸುತ್ತಾರೆ. "ಇಗೋ, ನಾನಿದ್ದೇನೆ, ನನ್ನನ್ನು ಕಳುಹಿಸು" ಎನ್ನುವ ಮನೋಭಾವ ಅವರಲ್ಲಿದೆ. (ಯೆಶಾಯ 6:8; ಯೋಹಾನ 7:29) ಊರು ಬಿಟ್ಟು ಹೋಗುವುದು ಸುಲಭವೇನಲ್ಲ. ಸರಳ ಜೀವನ ನಡೆಸಬೇಕಾಗುತ್ತದೆ. ಅಲ್ಲಿನ ಸಂಸ್ಕೃತಿ, ಹವಾಮಾನ, ಊಟ ಎಲ್ಲವೂ ಬೇರೆಯೇ ಆಗಿರಬಹುದು. ಹೊಸ ಭಾಷೆಯನ್ನು ಕಲಿಯಬೇಕಾಗಬಹುದು. ಇದಕ್ಕೆಲ್ಲ ಹೊಂದಿಕೊಳ್ಳಲು ಅವರು ಸಿದ್ಧರಾಗಿರುತ್ತಾರೆ. ಈ ಶಾಲೆಯಿಂದ ಅವಿವಾಹಿತ ಸಹೋದರರು, ಅವಿವಾಹಿತ ಸಹೋದರಿಯರು ಹಾಗೂ ದಂಪತಿಗಳು ತರಬೇತಿ ಪಡೆಯುತ್ತಾರೆ. ವಿದ್ಯಾರ್ಥಿಗಳ ವಯೋಮಿತಿ 23ರಿಂದ 65. ಈ ಶಾಲೆಯು ಅವರಿಗೆ ತಮ್ಮ ನೇಮಕವನ್ನು ನಿರ್ವಹಿಸಲು ಬೇಕಾಗುವ ಗುಣಗಳನ್ನು ಹಾಗೂ ಯೆಹೋವನಿಗೂ ಸಂಘಟನೆಗೂ ಹೆಚ್ಚು ಉಪಯುಕ್ತರಾಗಲಿಕ್ಕಾಗಿ ಬೇಕಾಗುವ ಕೌಶಲಗಳನ್ನು ಬೆಳೆಸಿಕೊಳ್ಳಲು ಸಹಾಯಮಾಡುತ್ತದೆ.



**ವಾಚ್‌ಟವರ್ ಬೈಬಲ್ ಸ್ಕೂಲ್ ಆಫ್ ಗಿಲ್ಯಡ್:** "ಗಿಲ್ಯಡ್" ಹೀಬ್ರು ಭಾಷೆಯ ಪದವಾಗಿದ್ದು "ಸಾಕ್ಷಿಗಾಗಿ ಹಾಕಿರುವ ಕುಪ್ಪೆ" ಎಂಬ ಅರ್ಥ ಅದಕ್ಕಿದೆ. ಇಸವಿ 1943ರಿಂದ ಇಂದಿನ ವರೆಗೆ ಈ ಶಾಲೆಯ 8,000ಕ್ಕೂ ಹೆಚ್ಚು ಪದವೀಧರರನ್ನು ಮಿಷನರಿಗಳಾಗಿ ಕಳುಹಿಸಲಾಗಿದೆ. "ಭೂಮಿಯ ಕಟ್ಟಕಡೆಯ ವರೆಗೂ" ಸಾಕ್ಷಿ ಕೊಡುವುದರಲ್ಲಿ ಅವರು ಯಶಸ್ಸು ಪಡೆದಿದ್ದಾರೆ. (ಅಪೊಸ್ತಲರ ಕಾರ್ಯಗಳು 13:47) ಉದಾಹರಣೆಗೆ, ಪೆರು ದೇಶಕ್ಕೆ ನಮ್ಮ ಮಿಷನರಿಗಳು ಕಾಲಿಡುವ ಮುನ್ನ ಅಲ್ಲಿ ಒಂದು ಸಭೆ ಕೂಡ ಇರಲಿಲ್ಲ. ಆದರೆ ಈಗ 1,000ಕ್ಕಿಂತ ಹೆಚ್ಚು ಸಭೆಗಳಿವೆ! ನಮ್ಮ ಮಿಷನರಿಗಳು ಜಪಾನಿನಲ್ಲಿ ಸೇವೆ ಆರಂಭಿಸಿದಾಗ ಅಲ್ಲಿದ್ದ ಯೆಹೋವನ ಸಾಕ್ಷಿಗಳು ಹತ್ತಕ್ಕಿಂತಲೂ ಕಡಿಮೆ. ಈಗ ಆ ಸಂಖ್ಯೆ 2 ಲಕ್ಷವನ್ನು ಮೀರಿದೆ. ಗಿಲ್ಯಡ್ ಶಾಲೆಯ ಅವಧಿ ಐದು ತಿಂಗಳು. ಇದರಲ್ಲಿ ವಿದ್ಯಾರ್ಥಿಗಳು ದೇವರ ವಾಕ್ಯವಾದ ಬೈಬಲಿನ ಸಮಗ್ರ ಅಧ್ಯಯನ ಮಾಡುತ್ತಾರೆ. ಈ ಶಾಲೆಗೆ ಯಾರನ್ನು ಆಮಂತ್ರಿಸಲಾಗುತ್ತದೆ? ವಿಶೇಷ ಪಯನೀಯರರು, ಮಿಷನರಿಗಳು, ಬ್ರಾಂಚ್ ಆಫೀಸಿನಲ್ಲಿ ಸೇವೆ ಮಾಡುವವರು ಹಾಗೂ ಸರ್ಕಿಟ್ ಸೇವೆಯಲ್ಲಿರುವವರು. ಲೋಕವ್ಯಾಪಕ ಕೆಲಸವನ್ನು ಹೆಚ್ಚು ಮಾಡಲು ಹಾಗೂ ಸುಗಮವಾಗಿ ನಡೆಸಲು ನೆರವಾಗುವಂತೆ ಈ ಶಾಲೆ ಅವರಿಗೆ ತರಬೇತಿ ನೀಡುತ್ತದೆ.



ಪನಾಮ

- ಪಯನೀಯರ್ ಸೇವಾ ಶಾಲೆಯ ಉದ್ದೇಶವೇನು?
- 'ರಾಜ್ಯ ಸೌವಾರ್ತಿಕರ ಶಾಲೆ' ಯಾರಿಗಾಗಿ?

15

# ಸಭೆಯಲ್ಲಿ ಹಿರಿಯರ ಜವಾಬ್ದಾರಿ ಏನು?



ಫಿನ್‌ಲೆಂಡ್



ಬೈಬಲ್ ಉಪದೇಶ

ಪರಿಪಾಲನಾ ಭೇಟಿ





ಸುವಾರ್ತೆ ಸಾರುವಿಕೆ

ಸಂಬಳಕ್ಕೆ ದುಡಿಯುವ ಪಾದ್ರಿಯನ್ನು ನೀವು ನಮ್ಮ ಸಭೆಯಲ್ಲಿ ಕಾಣಲಾರಿರಿ. ಏಕೆಂದರೆ, ಕ್ರೈಸ್ತ ಸಭೆ ಆರಂಭವಾದಾಗ ಇದ್ದ ನಮೂನೆಯನ್ನು ನಾವು ಅನುಕರಿಸುತ್ತೇವೆ. ನಮ್ಮಲ್ಲಿ ನಿಸ್ವಾರ್ಥದಿಂದ ದುಡಿಯುವ ಅರ್ಹ ಮೇಲ್ವಿಚಾರಕರಿದ್ದಾರೆ. ಅವರು ಪ್ರೀತಿಯಿಂದ ಸಭೆಯ ಪರಿಪಾಲನೆ ಮಾಡುತ್ತಾರೆ. (ಅಪೊಸ್ತಲರ ಕಾರ್ಯಗಳು 20:28) 'ಹಿರಿಯರು' ಎಂದು ಕರೆಯಲಾಗುವ ಅವರು ದೇವರೊಂದಿಗೆ ಅತ್ಯಾಪ್ತ ಸಂಬಂಧ ಹೊಂದಿರುವ ಪುರುಷರಾಗಿದ್ದಾರೆ. ಅವರು "ಅಪ್ರಾಮಾಣಿಕ ಲಾಭದ ಮೇಲಣ ಪ್ರೀತಿಯಿಂದಲ್ಲ, ಸಿದ್ಧಮನಸ್ಸಿನಿಂದ" ಇಚ್ಛಾಪೂರ್ವಕವಾಗಿ ಸಭೆಯ ಮೇಲುಸ್ತುವಾರಿ ನೋಡಿಕೊಳ್ಳುತ್ತಾರೆ. (1 ಪೇತ್ರ 5:1-3) ಸಭೆಯಲ್ಲಿ ಅವರು ಯಾವ ರೀತಿಯ ಜವಾಬ್ದಾರಿ ನಿರ್ವಹಿಸುತ್ತಾರೆ?

**ನಮ್ಮನ್ನು ಕಾಪಾಡಿ ಸಲಹುತ್ತಾರೆ.** ದೇವರೊಂದಿಗಿನ ಆಪ್ತ ಬಾಂಧವ್ಯ ಕಾಪಾಡಿಕೊಳ್ಳುವಂತೆ ಸಭೆಯಲ್ಲಿರುವವರನ್ನು ಹಿರಿಯರು ಮಾರ್ಗದರ್ಶಿಸುತ್ತಾರೆ. ಈ ಭಾರಿ ಜವಾಬ್ದಾರಿ ನೀಡಿದ್ದು ದೇವರು ಎನ್ನುವುದನ್ನು ಸದಾ ಮನಸ್ಸಲ್ಲಿ ಇಟ್ಟುಕೊಳ್ಳುವ ಅವರು ಸಭೆಯವರ ಮೇಲೆ ಅಧಿಕಾರ ಚಲಾಯಿಸದೆ ಹಿತಾಸಕ್ತಿ ತೋರಿಸಿ ಸಂತೋಷ ಹೆಚ್ಚಿಸುತ್ತಾರೆ. (2 ಕೊರಿಂಥ 1:24) ಅಪಾರ ಪ್ರೀತಿ ಮಮತೆಯುಳ್ಳ ಕುರುಬನು ಪ್ರತಿಯೊಂದು ಕುರಿಯ ಯೋಗಕ್ಷೇಮ ನೋಡಿಕೊಳ್ಳುವಂತೆ ಹಿರಿಯರು ಸಭೆಯ ಪ್ರತಿಯೊಬ್ಬ ಸದಸ್ಯರನ್ನು ಚೆನ್ನಾಗಿ ಪರಿಚಯ ಮಾಡಿಕೊಂಡು ಕಾಳಜಿ ತೋರಿಸುತ್ತಾರೆ.—ಜ್ಞಾನೋಕ್ತಿ 27:23.

**ದೇವರ ಇಷ್ಟವನ್ನು ಮಾಡಲು ಕಲಿಸುತ್ತಾರೆ.** ದೇವರ ಮೇಲಿನ ನಮ್ಮ ನಂಬಿಕೆ ಗಾಢವಾಗುವಂತೆ ಹಿರಿಯರು ಪ್ರತಿವಾರ ಸಭಾ ಕೂಟಗಳಲ್ಲಿ ಬೈಬಲ್ ಉಪದೇಶ ನೀಡುತ್ತಾರೆ. (ಅಪೊಸ್ತಲರ ಕಾರ್ಯಗಳು 15:32) ಅರ್ಪಣಾ ಭಾವದ ಈ ಸಹೋದರರು ಸುವಾರ್ತೆ ಸಾರುವ ಕೆಲಸದಲ್ಲಿ ಮುಂದಾಳತ್ವ ವಹಿಸುತ್ತಾರೆ. ನಮ್ಮೊಂದಿಗೆ ಸೇವೆಗೆ ಬರುತ್ತಾರೆ. ಸುವಾರ್ತೆ ಸಾರುವ ಬೇರೆ ಬೇರೆ ವಿಧಾನಗಳನ್ನು ಕಲಿಸುತ್ತಾರೆ.

**ವ್ಯಕ್ತಿಗತವಾಗಿ ಕಾಳಜಿ ವಹಿಸಿ ಪ್ರೋತ್ಸಾಹಿಸುತ್ತಾರೆ.** ಯೆಹೋವ ದೇವರೊಂದಿಗೆ ಸದಾ ಆಪ್ತವಾಗಿರುವಂತೆ ಹಿರಿಯರು ಒಬ್ಬೊಬ್ಬರಿಗೂ ವೈಯಕ್ತಿಕ ನೆರವು ನೀಡುತ್ತಾರೆ. ರಾಜ್ಯ ಸಭಾಗೃಹದಲ್ಲಿ ಅಥವಾ ಮನೆಯಲ್ಲಿ ನಮ್ಮೊಂದಿಗೆ ಸಮಯ ವ್ಯಯಿಸಿ ಬೈಬಲಿನಿಂದ ಸಲಹೆ ಸಾಂತ್ವನ ಕೊಟ್ಟು ಪ್ರೋತ್ಸಾಹಿಸುತ್ತಾರೆ.—ಯಾಕೋಬ 5:14, 15.

ಸಭಾ ಜವಾಬ್ದಾರಿಗಳು ಮಾತ್ರವಲ್ಲದೆ ಅವರು ತಮ್ಮ ಸಮಯ ಗಮನವನ್ನು ಉದ್ಯೋಗಕ್ಕೂ ಕುಟುಂಬಕ್ಕೂ ನೀಡಬೇಕಾಗುತ್ತದೆ. ಇವೆಲ್ಲದರ ಮಧ್ಯೆ ನಮ್ಮ ಹಿತಾಸಕ್ತಿಗಾಗಿ ದುಡಿಯುವ ಈ ಸಹೋದರರು ಅಭಿನಂದನಾರ್ಹರು.—1 ಥೆಸಲೊನೀಕ 5:12, 13.

- ಸಭೆಯಲ್ಲಿ ಹಿರಿಯರ ಜವಾಬ್ದಾರಿಗಳೇನು?
- ಯಾವೆಲ್ಲ ವಿಧಗಳಲ್ಲಿ ಹಿರಿಯರು ನಮಗೆ ವ್ಯಕ್ತಿಗತ ಕಾಳಜಿ ತೋರಿಸುತ್ತಾರೆ?

**ಇನ್ನಷ್ಟು ತಿಳಿಯಲು . . .**

ಹಿರಿಯರಾಗಲು ಮತ್ತು ಶುಶ್ರೂಷಾ ಸೇವಕರಾಗಲು ಅರ್ಹತೆಗಳೇನು? ಉತ್ತರಕ್ಕಾಗಿ 1 ತಿಮೊಥೆಯ 3:1-10, 12; ತೀತ 1:5-9 ವಚನಗಳನ್ನು ಓದಿ.

# ಸಹಾಯಕ ಸೇವಕರ ಜವಾಬ್ದಾರಿ ಏನು?

ಸಭೆಯ ಜವಾಬ್ದಾರಿಗಳನ್ನು ಅರ್ಹ ಸಹೋದರರು ನೋಡಿಕೊಳ್ಳಬೇಕು ಅಂತ ಬೈಬಲ್ ತಿಳಿಸುತ್ತದೆ. ಅವರಲ್ಲಿ ಕೆಲವರು ಮೇಲ್ವಿಚಾರಕರಾಗಿ ಸೇವೆ ಸಲ್ಲಿಸಿದರೆ ಇನ್ನು ಕೆಲವರು ಸಹಾಯಕ ಸೇವಕರಾಗಿ ಸೇವೆ ಸಲ್ಲಿಸುತ್ತಾರೆ. (ಫಿಲಿಪ್ಪಿ 1:1) ಹೀಗೆ ಪ್ರತಿಯೊಂದು ಸಭೆಯಲ್ಲಿ ಮೇಲ್ವಿಚಾರಕರಾಗಿ ಹಿರಿಯರು ಹಾಗೂ ಅವರಿಗೆ ಸಹಾಯಕರಾಗಿ ಸಹಾಯಕ ಸೇವಕರು ಇರುತ್ತಾರೆ. ಸಹಾಯಕ ಸೇವಕರ ಜವಾಬ್ದಾರಿಗಳೇನು?

**ಸಭಾ ಹಿರಿಯರಿಗೆ ಸಹಾಯಕರಾಗಿ ಸೇವೆ ಸಲ್ಲಿಸುತ್ತಾರೆ.** ಸಹಾಯಕ ಸೇವಕರು ದೇವಭಕ್ತ ಸಹೋದರರು. ವಿಶ್ವಾಸಪಾತ್ರರಾದ ಇವರು ಹಿರಿಯರು ಕೊಡುವ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ಸಭಾ ಹಿರಿಯರು ಬೋಧಿಸುವ ಮತ್ತು ಪರಿಪಾಲನೆ ಮಾಡುವ ಕೆಲಸಕ್ಕೆ ಹೆಚ್ಚು ಗಮನ ನೀಡುವಾಗ ಸಹಾಯಕ ಸೇವಕರು ಇತರ ಏರ್ಪಾಡುಗಳನ್ನು ನೋಡಿಕೊಳ್ಳುತ್ತಾರೆ. ಯುವಕರಿಂದ ವಯೋವೃದ್ಧರ ವರೆಗೆ ಇರುವ ಈ ಸೇವಕರು ಹಿರಿಯರಿಗೆ ಸಹಾಯಕರಾಗಿ ಸಭೆಗೆ ಸಲ್ಲಿಸುವ ಸೇವೆ ತುಂಬ ಅಮೂಲ್ಯವಾಗಿದೆ.

**ಸಭೆಗೆ ಬಹು ಉಪಯುಕ್ತ ಸೇವೆ ಸಲ್ಲಿಸುತ್ತಾರೆ.** ಕೆಲವು ಸಹಾಯಕ ಸೇವಕರನ್ನು ಅಟೆಂಡೆಂಟ್ ಆಗಿ ನೇಮಿಸಲಾಗುತ್ತದೆ. ಸಭೆಗೆ ಬರುವವರನ್ನು ಅವರು ಸ್ವಾಗತಿಸಿ ಆಸನ ವ್ಯವಸ್ಥೆ ಮಾಡಿಕೊಡುತ್ತಾರೆ. ಇನ್ನಿತರ ಸಹಾಯಕ ಸೇವಕರು ಧ್ವನಿ ಉಪಕರಣ, ಸಾಹಿತ್ಯ ವಿತರಣೆ, ಸಭೆಯ ಅಕೌಂಟ್ಸ್ ಮುಂತಾದವನ್ನು ನೋಡಿಕೊಳ್ಳುತ್ತಾರೆ. ಯಾರ್ಯಾರು ಯಾವ್ಯಾವ ಪ್ರದೇಶದಲ್ಲಿ ಸುವಾರ್ತೆ ಸಾರಬೇಕೆಂದು ನೇಮಿಸುವ ಕೆಲಸವನ್ನು ಅವರು ನಿರ್ವಹಿಸುತ್ತಾರೆ. ರಾಜ್ಯ ಸಭಾಗೃಹದ ದುರಸ್ತಿ ಕಾರ್ಯಗಳನ್ನು ನೋಡಿಕೊಂಡು ಸುಸ್ಥಿತಿಯಲ್ಲಿ ಇಡುತ್ತಾರೆ. ವೃದ್ಧರಿಗೆ ನೆರವು ನೀಡುವಂತೆಯೂ ಹಿರಿಯರು ಅವರನ್ನು ಕೇಳಿಕೊಳ್ಳುತ್ತಾರೆ. ಈ ಎಲ್ಲಾ ಜವಾಬ್ದಾರಿಯನ್ನು ಸಿದ್ಧ ಮನಸ್ಸಿನಿಂದ ಮಾಡುವ ಅವರು ಸಭೆಯ ಶ್ಲಾಘನೆಗೆ ಪಾತ್ರರು.—1 ತಿಮೊಥೆಯ 3:13.

**ಇತರರಿಗೆ ಆದರ್ಶರಾಗಿರುತ್ತಾರೆ.** ಒಳ್ಳೆಯ ಗುಣ ನಡತೆ ಅರ್ಹತೆಗಳಿರುವ ಸಹೋದರರನ್ನೇ ಸಹಾಯಕ ಸೇವಕರಾಗಿ ನೇಮಿಸಲಾಗುತ್ತದೆ. ಸಭಾ ಕೂಟಗಳಲ್ಲಿ ಅವರು ಉತ್ತಮವಾಗಿ ಕಾರ್ಯಕ್ರಮ ನಡೆಸಿಕೊಟ್ಟು ದೇವರಲ್ಲಿನ ನಮ್ಮ ನಂಬಿಕೆಯನ್ನು ಹೆಚ್ಚಿಸುತ್ತಾರೆ. ಸುವಾರ್ತೆ ಸಾರುವ ಕೆಲಸದಲ್ಲಿ ಮುಂದಾಳತ್ವ ವಹಿಸುತ್ತಾ ಅವರಿಡುವ ಮಾದರಿ ನಮ್ಮಲ್ಲಿ ಹುರುಪು ಹುಮ್ಮಸ್ಸನ್ನು ಹೆಚ್ಚಿಸುತ್ತದೆ. ಹಿರಿಯರಿಗೆ ಸಹಕಾರ ನೀಡಿ ಸಭೆಯಲ್ಲಿ ಒಗ್ಗಟ್ಟು ಸಂತೋಷದ ವಾತಾವರಣ ಸೃಷ್ಟಿಸುತ್ತಾರೆ. (ಎಫೆಸ 4:16) ಹೀಗೆ ಇನ್ನಷ್ಟು ಪ್ರಗತಿ ಮಾಡಿ ಹಿರಿಯರಾಗಿ ನೇಮಕಗೊಳ್ಳುತ್ತಾರೆ.

- ಸಹಾಯಕ ಸೇವಕರಾಗುವವರು ಯಾವ ರೀತಿಯ ವ್ಯಕ್ತಿಗಳಾಗಿರಬೇಕು?
- ಸಹಾಯಕ ಸೇವಕರು ಸಭೆಯಲ್ಲಿ ಯಾವ ಉಪಯುಕ್ತ ಸೇವೆ ಸಲ್ಲಿಸುತ್ತಾರೆ?



ಮಯಾನ್ಮಾರ್



ಸಭಾ ಕೂಟ



ಕ್ಷೇತ್ರ ಸೇವಾ ಗುಂಪು

ರಾಜ್ಯ ಸಭಾಗೃಹದ ಶುಚಿ ಕಾರ್ಯ



**ಇನ್ನಷ್ಟು ತಿಳಿಯಲು . . .**

ಪ್ರತಿಬಾರಿ ಸಭೆಗೆ ಹೋಗುವಾಗ ಕನಿಷ್ಠ ಪಕ್ಷ ಒಬ್ಬ ಹಿರಿಯರನ್ನು ಅಥವಾ ಸಹಾಯಕ ಸೇವಕರನ್ನು ಪರಿಚಯ ಮಾಡಿಕೊಳ್ಳಿ. ಹೀಗೆ ಎಲ್ಲಾ ಹಿರಿಯರ, ಸಹಾಯಕ ಸೇವಕರ ಮತ್ತವರ ಕುಟುಂಬದ ಪರಿಚಯ ನಿಮ್ಮದಾಗುತ್ತೆ.



17

# ಸಂಚರಣ ಮೇಲ್ವಿಚಾರಕರು ನಮಗೆ ಯಾವ ನೆರವು ನೀಡುತ್ತಾರೆ?



ಮಲಾವಿ



ಕ್ಷೇತ್ರ ಸೇವಾ ಗುಂಪು



ಸುವಾರ್ತೆ ಸಾರುವಿಕೆ

ಹಿರಿಯರ ಕೂಟ



ಬೈಬಲ್‌ನಲ್ಲಿ ಅಪೊಸ್ತಲ ಪೌಲ ಹಾಗೂ ಬಾರ್ನಬರ ಬಗ್ಗೆ ಬಹಳಷ್ಟು ಬಾರಿ ಪ್ರಸ್ತಾಪವಿದೆ. ಇವರಿಬ್ಬರು ಸಂಚರಣ ಮೇಲ್ವಿಚಾರಕರಾಗಿ ಸೇವೆ ಮಾಡುತ್ತಾ ಸಭೆಗಳನ್ನು ಭೇಟಿ ಮಾಡಿದರೆಂದು ಅದು ತಿಳಿಸುತ್ತದೆ. ಅವರ ಉದ್ದೇಶ? ಪೌಲನೇ ಅದನ್ನು ಹೇಳಿದ್ದಾನೆ. "ಪ್ರತಿಯೊಂದು ಊರಿಗೆ ಪುನಃ ಹೋಗಿ ಅಲ್ಲಿರುವ ಸಹೋದರರನ್ನು ಭೇಟಿಮಾಡಿ ಅವರು ಹೇಗಿದ್ದಾರೆಂದು" ನೋಡಲು ಬಯಸುತ್ತೇನೆ ಎಂದು ತಿಳಿಸಿದನು. ಅಂದರೆ ಪೌಲ ಬಾರ್ನಬರಿಗೆ ಸಭೆಯಲ್ಲಿದ್ದ ಸಹೋದರರ ಮೇಲೆ ಬಹಳ ಪ್ರೀತಿ ಕಳಕಳಿ ಇತ್ತು. ಆ ಕಾರಣದಿಂದಲೇ ಅವರನ್ನು ಆಧ್ಯಾತ್ಮಿಕವಾಗಿ ಪ್ರೋತ್ಸಾಹಿಸಲು ಭೇಟಿ ನೀಡುತ್ತಿದ್ದರು. ಇದಕ್ಕಾಗಿ ಕೆಲವೊಮ್ಮೆ ನೂರಾರು ಮೈಲು ಕ್ರಮಿಸುತ್ತಿದ್ದರು. (ಅಪೊಸ್ತಲರ ಕಾರ್ಯಗಳು 15:36) ಇಂದಿನ ಸಂಚರಣ ಮೇಲ್ವಿಚಾರಕರು ಸಹ ಅದೇ ಕೆಲಸವನ್ನು ಮಾಡುತ್ತಿದ್ದಾರೆ.

**ಸ್ಫೂರ್ತಿ ನೀಡುತ್ತಾರೆ.** ಪ್ರತಿಯೊಬ್ಬ ಸಂಚರಣ ಮೇಲ್ವಿಚಾರಕರು ಸುಮಾರು ಇಪ್ಪತ್ತು ಸಭೆಗಳನ್ನು ಭೇಟಿ ಮಾಡುತ್ತಾರೆ. ಈ ಸಭೆಗಳ ಗುಂಪನ್ನು ಒಂದು ಸರ್ಕಿಟ್ ಎಂದು ಕರೆಯಲಾಗುತ್ತದೆ. ಸಂಚರಣ ಮೇಲ್ವಿಚಾರಕರು ತಮ್ಮ ಸರ್ಕಿಟ್ ಕೆಳಗೆ ಬರುವ ಸಭೆಗಳನ್ನು ವರ್ಷಕ್ಕೆ ಎರಡಾವರ್ತಿ ಭೇಟಿ ಮಾಡಿ ಒಂದೊಂದು ಸಭೆಯೊಂದಿಗೆ ಒಂದೊಂದು ವಾರ ವ್ಯಯಿಸುತ್ತಾರೆ. ಈ ಮೇಲ್ವಿಚಾರಕರು ಮತ್ತು ಅವರ ಪತ್ನಿಯರು ತಮ್ಮ ಜ್ಞಾನ ಅನುಭವದಿಂದ ನಮ್ಮನ್ನು ಬಹಳವಾಗಿ ಪ್ರೋತ್ಸಾಹಿಸುತ್ತಾರೆ. ಆಬಾಲವೃದ್ಧರೆನ್ನದೆ ಸಭೆಯಲ್ಲಿರುವ ಎಲ್ಲರ ಪರಿಚಯ ಮಾಡಿಕೊಳ್ಳುತ್ತಾರೆ. ಕ್ಷೇತ್ರ ಸೇವೆಯ ಕಾರ್ಯಚಟುವಟಿಕೆಯಲ್ಲಿ ನಮ್ಮೊಂದಿಗೆ ಜೊತೆಗೂಡುತ್ತಾರೆ. ಈ ಮೇಲ್ವಿಚಾರಕರು ಹಿರಿಯರೊಂದಿಗೆ ಪರಿಪಾಲನಾ ಭೇಟಿಗೆ ಹೋಗುತ್ತಾರೆ. ಸಭಾ ಕೂಟ ಹಾಗೂ ಸಮ್ಮೇಳನಗಳಲ್ಲಿ ಹುರಿದುಂಬಿಸುವ ಭಾಷಣ ನೀಡಿ ಸ್ಫೂರ್ತಿ ತುಂಬುತ್ತಾರೆ.—ಅಪೊಸ್ತಲರ ಕಾರ್ಯಗಳು 15:35.

**ಹಿತಾಸಕ್ತಿ ತೋರಿಸುತ್ತಾರೆ.** ಸಂಚರಣ ಮೇಲ್ವಿಚಾರಕರಿಗೆ ಸಭೆಯ ಆಧ್ಯಾತ್ಮಿಕ ಸ್ಥಿತಿಗತಿ ಬಗ್ಗೆ ತೀವ್ರ ಅಭಿರುಚಿ ಇದೆ. ಹಿರಿಯರು ಮತ್ತು ಶುಶ್ರೂಷಾ ಸೇವಕರೊಂದಿಗೆ ಸಭೆ ಸೇರಿ ಸಭಾ ಜವಾಬ್ದಾರಿಗಳನ್ನು ನಿರ್ವಹಿಸಲು ಬೇಕಾದ ಉಪಯುಕ್ತ ಸಲಹೆಗಳನ್ನು ನೀಡುತ್ತಾರೆ. ಹಾಗೆಯೇ ಸಭೆಯ ಪ್ರಗತಿಯನ್ನು ಪರಿಶೀಲಿಸುತ್ತಾರೆ. ಸುವಾರ್ತೆ ಸಾರುವುದರಲ್ಲಿ ಯಶಸ್ಸು ಕಾಣಲು ಪಯನೀಯರರಿಗೆ ಸಹಾಯ ಮಾಡುತ್ತಾರೆ. ಸಭೆಗೆ ಹೊಸದಾಗಿ ಬರುವವರ ಪರಿಚಯ ಮಾಡಿಕೊಂಡು ಅವರ ಆಧ್ಯಾತ್ಮಿಕ ಪ್ರಗತಿಯನ್ನು ತಿಳಿಯಲು ಆಸಕ್ತರಾಗಿರುತ್ತಾರೆ. ಈ ಪ್ರೀತಿಯ ಮೇಲ್ವಿಚಾರಕರು ನಮ್ಮ "ಹಿತಾಸಕ್ತಿಗಾಗಿರುವ ಜೊತೆ ಕೆಲಸಗಾರ"ರಾಗಿದ್ದು ದೇವರ ಸೇವೆಗೆ ತಮ್ಮನ್ನು ನೀಡಿಕೊಂಡಿದ್ದಾರೆ. (2 ಕೊರಿಂಥ 8:23) ಅವರ ನಂಬಿಕೆ ಭಕ್ತಿ ಅನುಕರಣಾಯೋಗ್ಯ.—ಇಬ್ರಿಯ 13:7.

- ಸಂಚರಣ ಮೇಲ್ವಿಚಾರಕರು ಸಭೆಗಳಿಗೆ ಭೇಟಿ ನೀಡುವ ಉದ್ದೇಶವೇನು?
- ಅವರ ಭೇಟಿಯಿಂದ ನೀವು ಯಾವ ಪ್ರಯೋಜನ ಪಡೆಯುವಿರಿ?

### ಇನ್ನಷ್ಟು ತಿಳಿಯಲು . . .

ಸಂಚರಣ ಮೇಲ್ವಿಚಾರಕರ ಭೇಟಿಯ ದಿನಾಂಕವನ್ನು ಕ್ಯಾಲೆಂಡರ್‌ನಲ್ಲಿ ಗುರುತು ಹಾಕಿ. ಆ ವಾರದಲ್ಲಿ ಸಭಾ ಕೂಟಗಳಿಗೆ ಹಾಜರಾಗಿ ಅವರ ಭಾಷಣಗಳನ್ನು ಆಲಿಸಿ. ಅವರನ್ನು ಅಥವಾ ಅವರ ಪತ್ನಿಯನ್ನು ಬೈಬಲ್ ಕಲಿಕೆಗೆ ಆಮಂತ್ರಿಸುವಂತೆ ನಿಮ್ಮ ಬೈಬಲ್ ಟೀಚರ್‌ಗೆ ಹೇಳಿ. ಹೀಗೆ ಅವರ ಇನ್ನಷ್ಟು ಪರಿಚಯ ಮಾಡಿಕೊಳ್ಳಿ.

# ವಿಪತ್ತಿನ ಸಮಯದಲ್ಲಿ ನಾವು ಹೇಗೆ ಸ್ಪಂದಿಸುತ್ತೇವೆ?



ವಿಪತ್ತು ಎಲ್ಲೇ ಸಂಭವಿಸಲಿ ಯೆಹೋವನ ಸಾಕ್ಷಿಗಳು ತಕ್ಷಣ ಪರಿಹಾರ ಕಾರ್ಯದಲ್ಲಿ ತೊಡಗಿ ಸಂತ್ರಸ್ತ ಸೋದರ ಸೋದರಿಯರಿಗೆ ನೆರವು ನೀಡುತ್ತಾರೆ. ನಮ್ಮಲ್ಲಿ ಪರಸ್ಪರ ನಿಜವಾದ ಪ್ರೀತಿ ಇದೆ ಎನ್ನುವುದಕ್ಕೆ ಇದು ಪ್ರತ್ಯಕ್ಷ ಸಾಕ್ಷಿ. (ಯೋಹಾನ 13:34, 35; 1 ಯೋಹಾನ 3:17, 18) ವಿಪತ್ತಿನ ಸಮಯದಲ್ಲಿ ನಾವು ಪರಸ್ಪರ ಹೇಗೆ ನೆರವಾಗುತ್ತೇವೆ?

**ಹಣಕಾಸಿನ ನೆರವು ನೀಡುತ್ತೇವೆ.** ಒಂದನೇ ಶತಮಾನದಲ್ಲಿ ಯೂದಾಯ ಎಂಬಲ್ಲಿ ದೊಡ್ಡ ಕ್ಷಾಮ ಉಂಟಾದಾಗ ಅಂತಿಯೋಕ್ಯದಲ್ಲಿದ್ದ ಕ್ರೈಸ್ತರು ತಮ್ಮ ಆ ಸಹೋದರರಿಗೆ ಹಣಕಾಸಿನ ನೆರವು ನೀಡಿದರು. (ಅಪೊಸ್ತಲರ ಕಾರ್ಯಗಳು 11:27-30) ಅದೇ ರೀತಿ ನಮ್ಮ ಸಹೋದರರು ಎಲ್ಲೇ ಇರಲಿ ವಿಪತ್ತಿಗೆ ಗುರಿಯಾಗಿದ್ದಾರೆ ಎಂದು ಕೇಳಿದೊಡನೆ ನಾವು ನಮ್ಮ ಸಭೆಯ ಮುಖಾಂತರ ಪರಿಹಾರ ಸಾಮಗ್ರಿ ಕಳುಹಿಸಿ ಅವರ ಕೊರತೆ ನೀಗಿಸಲು ನೆರವಾಗುತ್ತೇವೆ.—2 ಕೊರಿಂಥ 8:13-15.

**ಉಪಯುಕ್ತ ನೆರವು ನೀಡುತ್ತೇವೆ.** ವಿಪತ್ತು ಸಂಭವಿಸುವಲ್ಲಿ ಹಿರಿಯರು ಕೂಡಲೇ ಆ ಪ್ರದೇಶದಲ್ಲಿರುವ ಸೋದರ ಸೋದರಿಯರೆಲ್ಲ ಸುರಕ್ಷಿತರಾಗಿದ್ದಾರಾ ಎಂದು ಖಚಿತಪಡಿಸಿಕೊಳ್ಳುತ್ತಾರೆ. ವಿಪತ್ತು ಪರಿಹಾರ ಕಮಿಟಿಯು ಆಹಾರ, ಕುಡಿಯುವ ನೀರು, ಬಟ್ಟೆಬರೆ, ಸೂರು ಹಾಗೂ ವೈದ್ಯಕೀಯ ನೆರವು ಒದಗಿಸಲು ಏರ್ಪಾಡು ಮಾಡುತ್ತದೆ. ಯೆಹೋವನ ಸಾಕ್ಷಿಗಳು ಸ್ವಂತ ವೆಚ್ಚದಲ್ಲಿ ಆ ಪ್ರದೇಶಗಳಿಗೆ ಹೋಗಿ ಪರಿಹಾರ ಕಾರ್ಯದಲ್ಲಿ ತೊಡಗುತ್ತಾರೆ. ಮನೆಗಳನ್ನು ರಾಜ್ಯ ಸಭಾಗೃಹಗಳನ್ನು ದುರಸ್ತಿ ಮಾಡುತ್ತಾರೆ. ಒಗ್ಗಟ್ಟು ಸಹಕಾರದಿಂದ ಕೆಲಸ ಮಾಡುವುದು ಹೇಗೆಂದು ನಮ್ಮ ಸಂಘಟನೆ ನಮಗೆ ಕಲಿಸಿರುವುದರಿಂದ ವಿಪತ್ತಿನ ಸಮಯದಲ್ಲಿ ತಕ್ಷಣವೇ ಪರಿಹಾರ ಕಾರ್ಯಕ್ಕಿಳಿಯಲು ಸುಲಭ. “ನಂಬಿಕೆಯಲ್ಲಿ ನಮ್ಮ ಸಂಬಂಧಿಕರಂತಿರುವ” ಸಹೋದರರಿಗೆ ಮಾತ್ರವಲ್ಲ ನಾವು ಬೇರೆ ಧರ್ಮದವರಿಗೂ ಸಹಾಯಹಸ್ತ ಚಾಚುತ್ತೇವೆ. —ಗಲಾತ್ಯ 6:10.

**ಆಧ್ಯಾತ್ಮ ಹಾಗೂ ಭಾವನಾತ್ಮ ನೆರವು ನೀಡುತ್ತೇವೆ.** ವಿಪತ್ತಿಗೆ ತುತ್ತಾಗಿರುವವರ ಮನವು ಸಾಂತ್ವನ ನೆಮ್ಮದಿಗೆ ಹಾತೊರೆಯುತ್ತಿರುತ್ತದೆ. ಯೆಹೋವ ದೇವರು “ಸಕಲ ಸಾಂತ್ವನ” ಒದಗಿಸುವ ದೇವರಾಗಿದ್ದಾನೆ. ನಮಗೆ ಬೇಕಾದ ಮನೋಬಲವನ್ನು ಆತನು ಒದಗಿಸುತ್ತಾನೆ. (2 ಕೊರಿಂಥ 1:3, 4) ಹಾಗಾಗಿ ಸಂತ್ರಸ್ತರಿಗೆ ನಾವು ಬೈಬಲಿನಿಂದ ದೇವರ ಸಾಂತ್ವನದ ನುಡಿಗಳನ್ನು ತಿಳಿಸುತ್ತೇವೆ. ಕಷ್ಟನೋವನ್ನು ಉಂಟುಮಾಡುವ ಎಲ್ಲಾ ವಿಷಯಗಳನ್ನು ದೇವರ ರಾಜ್ಯ ಶೀಘ್ರದಲ್ಲೇ ಇಲ್ಲವಾಗಿಸುತ್ತದೆ ಎಂಬ ಸತ್ಯವನ್ನು ತಿಳಿಸುತ್ತೇವೆ.—ಪ್ರಕಟನೆ 21:4.

- ತಕ್ಷಣವೇ ಪರಿಹಾರ ಕಾರ್ಯಕ್ಕಿಳಿಯಲು ಯೆಹೋವನ ಸಾಕ್ಷಿಗಳಿಂದ ಹೇಗೆ ಸಾಧ್ಯವಾಗಿದೆ?
- ಸಂತ್ರಸ್ತರಿಗೆ ಹೇಗೆ ಸಾಂತ್ವನ ನೀಡುತ್ತೇವೆ?



ಡೊಮಿನಿಕನ್ ಗಣರಾಜ್ಯ



ಜಪಾನ್

ಹೈಟಿ



19

# ನಂಬಿಗಸ್ತನೂ ವಿವೇಚನೆಯುಳ್ಳವನೂ ಆದ ಆಳು ಯಾರು?



ಯೇಸು ತಾನು ಸಾವನ್ನಪ್ಪುವ ಕೆಲವು ದಿನಗಳ ಮುಂಚೆ ಪೇತ್ರ, ಯಾಕೋಬ, ಯೋಹಾನ ಮತ್ತು ಅಂದ್ರೆಯ ಎಂಬ ತನ್ನ ನಾಲ್ವರು ಶಿಷ್ಯರ ಜೊತೆ ಮಾತುಕತೆ ನಡೆಸಿದನು. ಅವರಿಗೆ ದುಷ್ಟ ಲೋಕದ ಅಂತ್ಯ ಯಾವಾಗ ಎಂದು ಸೂಚನೆ ನೀಡುವಾಗ ಒಂದು ಪ್ರಶ್ನೆ ಕೇಳಿದನು. "ತನ್ನ ಮನೆಯವರಿಗೆ ತಕ್ಕ ಸಮಯಕ್ಕೆ ಆಹಾರವನ್ನು ಕೊಡಲಿಕ್ಕಾಗಿ ಯಜಮಾನನು ನೇಮಿಸಿದ ನಂಬಿಗಸ್ತನೂ ವಿವೇಚನೆಯುಳ್ಳವನೂ ಆದಂಥ ಆಳು ನಿಜವಾಗಿಯೂ ಯಾರು?" (ಮತ್ತಾಯ 24:3, 45; ಮಾರ್ಕ 13:3, 4) ಅದು ಕೇವಲ ಪ್ರಶ್ನೆ ಆಗಿರಲಿಲ್ಲ. ಯಜಮಾನನಾದ ಯೇಸು ನೀಡಿದ ಭರವಸೆಯಾಗಿತ್ತು. ಕಡೇದಿವಸಗಳಲ್ಲಿ ತನ್ನ ಅನುಯಾಯಿಗಳಿಗೆ ಆಧ್ಯಾತ್ಮಿಕ ಆಹಾರ ಒದಗಿಸಲು ಕೆಲವರನ್ನು ನೇಮಿಸುವುದಾಗಿ ಯೇಸು ಹೇಳಿದನು. ಅವರನ್ನೇ "ಆಳು" ಎಂದನು. ಆ "ಆಳು" ಯಾರು?



ಆಧ್ಯಾತ್ಮಿಕ ಆಹಾರದ ಪ್ರಯೋಜನ ಅಪಾರ

**ಯೇಸುವಿನ ಅಭಿಷಿಕ್ತ ಹಿಂಬಾಲಕರ ಒಂದು ಚಿಕ್ಕ ಗುಂಪು.** ಯೆಹೋವನ ಸಾಕ್ಷಿಗಳ ಆಡಳಿತ ಮಂಡಲಿ ಈ 'ಆಳಾಗಿ' ಕಾರ್ಯನಿರ್ವಹಿಸುತ್ತಿದೆ. ಈ ಆಳು ಸಹಆರಾಧಕರಿಗೆ ಆಧ್ಯಾತ್ಮಿಕ ಆಹಾರ ಒದಗಿಸುವುದರಲ್ಲಿ ಕ್ರಿಯಾಶೀಲ. ನಮ್ಮ ಪಾಲಿನ ಆಧ್ಯಾತ್ಮಿಕ ಆಹಾರವನ್ನು ತಕ್ಕ ಸಮಯಕ್ಕೆ ಹೇರಳವಾಗಿ ಪಡೆದುಕೊಡುವುದರಿಂದ ನಾವು ಸದಾ ಆ ಆಳಿನ ಮೇಲೆ ಅವಲಂಬಿತರು.—ಲೂಕ 12:42.

**ದೇವರ ಭೂಪರಿವಾರವನ್ನು ನೋಡಿಕೊಳ್ಳುತ್ತದೆ.** (1 ತಿಮೊಥೆಯ 3:15) ಯೆಹೋವ ದೇವರ ಸಂಘಟನೆಯ ಭೂ ವ್ಯವಹಾರಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಯೇಸು ಈ ನಂಬಿಗಸ್ತ ಆಳಿಗೆ ಒಪ್ಪಿಸಿದ್ದಾನೆ. ಸುವಾರ್ತೆ ಸಾರುವ ಕೆಲಸ, ಸಭೆಯ ಮೂಲಕ ನಮಗೆ ಉಪದೇಶ ನೀಡುವ ಕಾರ್ಯ ಹಾಗೂ ಸಂಘಟನೆಯ ಎಲ್ಲಾ ಆಸ್ತಿಪಾಸ್ತಿಗಳ ಉಸ್ತುವಾರಿಯನ್ನು ಆಳು ನೋಡಿಕೊಳ್ಳುತ್ತದೆ. ಹೀಗೆ ಇಂದು ನಂಬಿಗಸ್ತನೂ ವಿವೇಚನೆಯುಳ್ಳವನೂ ಆದ ಆಳು ನಮಗೆ ಬೇಕಾದ ಆಧ್ಯಾತ್ಮಿಕ ಆಹಾರವನ್ನು ಸಾಹಿತ್ಯ, ಸಭಾ ಕೂಟ, ಸಮ್ಮೇಳನಗಳ ಮುಖೇನ ಸಮಯಕ್ಕೆ ಸರಿಯಾಗಿ ಒದಗಿಸುತ್ತಿದೆ.



ಈ ಆಳು ನಿಜವಾಗಲೂ **ನಂಬಿಗಸ್ತ.** ಏಕೆಂದರೆ ಬೈಬಲ್ ಹೇಳುವುದನ್ನು ಹಾಗೂ ಸುವಾರ್ತೆ ಸಾರುವುದನ್ನು ನಿಷ್ಠೆಯಿಂದ ಮಾಡುತ್ತದೆ. ಅದೇ ರೀತಿ **ವಿವೇಚನೆಯುಳ್ಳ** ಆಳು. ಏಕೆಂದರೆ ಕ್ರಿಸ್ತನು ಅವರ ವಶಕ್ಕೆ ಒಪ್ಪಿಸಿರುವ ಸಕಲವನ್ನೂ ಜಾಣ್ಮೆಯಿಂದ ನಿರ್ವಹಿಸಿ ನೋಡಿಕೊಳ್ಳುತ್ತದೆ. (ಅಪೊಸ್ತಲರ ಕಾರ್ಯಗಳು 10:42) ಈ ಆಳು ಮಾಡುತ್ತಿರುವ ಕೆಲಸವನ್ನು ದೇವರು ಆಶೀರ್ವದಿಸಿ ಹೇರಳ ಆಧ್ಯಾತ್ಮಿಕ ಆಹಾರ ಒದಗಿಸಲು ಸಹಾಯ ಮಾಡುತ್ತಿದ್ದಾನೆ.—ಯೆಶಾಯ 60:22; 65:13.

- ತನ್ನ ಅನುಯಾಯಿಗಳಿಗೆ ಆಧ್ಯಾತ್ಮಿಕ ಆಹಾರ ಒದಗಿಸಲು ಯೇಸು ಯಾರನ್ನು ನೇಮಿಸಿದನು?
- ಈ ಆಳನ್ನು ನಂಬಿಗಸ್ತನೂ ವಿವೇಚನೆಯುಳ್ಳವನೂ ಎಂದು ಹೇಳುವುದೇಕೆ?

# ಆಡಳಿತ ಮಂಡಲಿಯ ಕಾರ್ಯವೇನು?

ಒಂದನೇ ಶತಮಾನದಲ್ಲಿ, "ಯೆರೂಸಲೇಮಿನಲ್ಲಿದ್ದ ಅಪೊಸ್ತಲರ ಮತ್ತು ಹಿರೀಪುರುಷರ" ಒಂದು ಚಿಕ್ಕ ಗುಂಪು ಆಡಳಿತ ಮಂಡಲಿಯಾಗಿ ಕಾರ್ಯನಿರ್ವಹಿಸಿತು. ಆ ಸಮಯದಲ್ಲಿದ್ದ ಸಭೆಗಳಲ್ಲಿ ಅಭಿಷಿಕ್ತರೇ ಇದ್ದರಾದರೂ ಅವರೆಲ್ಲರ ಪರವಾಗಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದದ್ದು ಆಡಳಿತ ಮಂಡಲಿ. (ಅಪೊಸ್ತಲರ ಕಾರ್ಯಗಳು 15:2) ಆಡಳಿತ ಮಂಡಲಿಯ ಸಹೋದರರು ಬೈಬಲನ್ನು ಪರಿಶೀಲಿಸಿ, ಚರ್ಚಿಸಿ, ದೇವರ ಪವಿತ್ರಾತ್ಮ ಶಕ್ತಿಯ ಮಾರ್ಗದರ್ಶನೆ ಏನೆಂದು ಕಂಡುಕೊಂಡು ಒಮ್ಮತದ ನಿರ್ಣಯ ತೆಗೆದುಕೊಳ್ಳುತ್ತಿದ್ದರು. (ಅಪೊಸ್ತಲರ ಕಾರ್ಯಗಳು 15:25) ಅದೇ ನಮೂನೆಯನ್ನು ಇಂದು ಸಹ ಅನುಕರಿಸಲಾಗುತ್ತಿದೆ.

**ದೇವರು ತನ್ನ ಇಷ್ಟವನ್ನು ನೆರವೇರಿಸಲು ಆಡಳಿತ ಮಂಡಲಿಯನ್ನು ಉಪಯೋಗಿಸುತ್ತಾನೆ.** ಆಡಳಿತ ಮಂಡಲಿಯ ಸಹೋದರರು ದೇವರ ವಾಕ್ಯವಾದ ಬೈಬಲಿಗೆ ಬಹಳ ಮಹತ್ವ ನೀಡುತ್ತಾರೆ. ಅವರು ಆಧ್ಯಾತ್ಮ ವಿಷಯಗಳನ್ನು ನಿರ್ವಹಿಸುವುದರಲ್ಲಿ ಪ್ರವೀಣರಾಗಿದ್ದಾರೆ. ಭೂವ್ಯಾಪಕವಾಗಿ ಹರಡಿಕೊಂಡಿರುವ ಸಹೋದರರ ಬಳಗದ ಅಗತ್ಯಗಳನ್ನು ಪೂರೈಸುವ ಸಲುವಾಗಿ ನಿರ್ಣಯಗಳನ್ನು ತೆಗೆದುಕೊಳ್ಳಲು ಪ್ರತಿವಾರ ಸಭೆಸೇರುತ್ತಾರೆ. ಒಂದನೇ ಶತಮಾನದಲ್ಲಿದ್ದ ಪ್ರಕಾರವೇ ಇಂದು ಸಹ ಬೈಬಲ್ ಸಲಹೆಗಳನ್ನು ಪತ್ರಗಳ ಮೂಲಕ ಅಥವಾ ಸಂಚರಣ ಮೇಲ್ವಿಚಾರಕರ ಹಾಗೂ ಮತ್ತಿತರರ ಮೂಲಕ ಸಭೆಗಳಿಗೆ ತಿಳಿಸುತ್ತಾರೆ. ದೇವಜನರು ಏಕಮನಸ್ಸಿನಿಂದ ಕ್ರಿಯೆಗೈಯುತ್ತಾ ಐಕ್ಯರಾಗಿರಲು ಇದು ನೆರವಾಗುತ್ತದೆ. (ಅಪೊಸ್ತಲರ ಕಾರ್ಯಗಳು 16:4, 5) ಆಡಳಿತ ಮಂಡಲಿ ಆಧ್ಯಾತ್ಮಿಕ ಆಹಾರವನ್ನು ಸಿದ್ಧಗೊಳಿಸುವ ಉಸ್ತುವಾರಿ ವಹಿಸುತ್ತದೆ. ದೇವರ ರಾಜ್ಯದ ಸಂದೇಶವನ್ನು ಸಾರಲು ಆದ್ಯತೆ ನೀಡುವಂತೆ ಸಭೆಗಳಿಗೆ ಪ್ರೋತ್ಸಾಹ ನೀಡುತ್ತದೆ. ಹಿರಿಯರ ಮತ್ತು ಶುಶ್ರೂಷಾ ಸೇವಕರ ನೇಮಕಾತಿಯ ಉಸ್ತುವಾರಿಯನ್ನು ಸಹ ನೋಡಿಕೊಳ್ಳುತ್ತದೆ.

**ಪವಿತ್ರಾತ್ಮದ ಮಾರ್ಗದರ್ಶನೆಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತದೆ.** ಆಡಳಿತ ಮಂಡಲಿಯ ಸಹೋದರರು ಪ್ರತಿಯೊಂದು ಕಾರ್ಯವನ್ನು ವಿಶ್ವಪರಮಾಧಿಕಾರಿ ಯೆಹೋವ ದೇವರ ಹಾಗೂ ಸಭೆಯ ಶಿರಸ್ಸಾಗಿರುವ ಯೇಸುವಿನ ಮಾರ್ಗದರ್ಶನೆಯ ಮೇರೆಗೆ ಮಾಡುತ್ತಾರೆ. (1 ಕೊರಿಂಥ 11:3; ಎಫೆಸ 5:23) ಆಡಳಿತ ಮಂಡಲಿಯ ಸಹೋದರರು ತಮ್ಮನ್ನು ದೇವಜನರ ನಾಯಕರೆಂದು ಭಾವಿಸುವುದಿಲ್ಲ. ಉಳಿದ ಅಭಿಷಿಕ್ತ ಸಹೋದರರೊಂದಿಗೆ ಜೊತೆಗೂಡಿ ಇವರು ಸಹ ಕುರಿಮರಿ ಯೇಸು ಎಲ್ಲಿ ಹೋದರೂ "ಅವನನ್ನು ಹಿಂಬಾಲಿಸುತ್ತಾ ಹೋಗುತ್ತಾರೆ." (ಪ್ರಕಟನೆ 14:4) ಆಡಳಿತ ಮಂಡಲಿಗಾಗಿ ನಾವು ಮಾಡುವ ಪ್ರಾರ್ಥನೆಗಳಿಗೆ ಆ ಮಂಡಲಿಯ ಸಹೋದರರು ಸದಾ ಕೃತಜ್ಞರು.

- ಒಂದನೇ ಶತಮಾನದ ಆಡಳಿತ ಮಂಡಲಿಯ ಸದಸ್ಯರು ಯಾರಾಗಿದ್ದರು?
- ಆಡಳಿತ ಮಂಡಲಿ ಇಂದು ದೇವರ ಮಾರ್ಗದರ್ಶನೆ ಪಡೆದುಕೊಳ್ಳುವ ವಿಧವನ್ನು ವಿವರಿಸಿ.



ಒಂದನೇ ಶತಮಾನದ ಆಡಳಿತ ಮಂಡಲಿ



ಆಡಳಿತ ಮಂಡಲಿಯ ಪತ್ರವನ್ನು ಸಭೆಯಲ್ಲಿ ಓದುತ್ತಿರುವುದು

**ಇನ್ನಷ್ಟು ತಿಳಿಯಲು . . .**

ಒಂದನೇ ಶತಮಾನದ ಆಡಳಿತ ಮಂಡಲಿ ಬೈಬಲ್ ಹಾಗೂ ಪವಿತ್ರಾತ್ಮದ ನೆರವಿನಿಂದ ಸಮಸ್ಯೆಯೊಂದನ್ನು ಹೇಗೆ ಬಗೆಹರಿಸಿತು ಎಂಬ ಸ್ವಾರಸ್ಯಕರ ವಿವರಗಳನ್ನು ಅಪೊಸ್ತಲರ ಕಾರ್ಯಗಳು 15ನೇ ಅಧ್ಯಾಯದ 1ರಿಂದ 35 ವಚನಗಳನ್ನು ಓದಿ ತಿಳಿದುಕೊಳ್ಳಿ.

21



ಕಲಾ ವಿಭಾಗ, ಅಮೆರಿಕ



ಜರ್ಮನಿ



ಕೀನ್ಯ

ಕೊಲಂಬಿಯ



# “ಬೆತೆಲ್” ಅಂದರೇನು?

ಬೆತೆಲ್ ಎನ್ನುವುದು ಹೀಬ್ರು ಭಾಷೆಯ ಪದವಾಗಿದ್ದು “ದೇವರ ಮನೆ” ಎಂದು ಅರ್ಥ. (ಆದಿಕಾಂಡ 28:17, 19) ಯೆಹೋವನ ಸಾಕ್ಷಿಗಳ ಬ್ರಾಂಚ್ ಆಫೀಸುಗಳನ್ನು ಬೆತೆಲ್ ಎಂದು ಕರೆಯಲಾಗುತ್ತದೆ. ಅದು ಆಯಾ ದೇಶಗಳಲ್ಲಿ ಸುವಾರ್ತೆ ಸಾರುವ ಕೆಲಸದ ಜವಾಬ್ದಾರಿ ವಹಿಸುತ್ತದೆ. ನಮ್ಮ ಕೇಂದ್ರ ಕಾರ್ಯಾಲಯ ಅಮೆರಿಕದ ನ್ಯೂಯಾರ್ಕ್‍ನಲ್ಲಿದೆ. ಅಲ್ಲಿಂದ ಆಡಳಿತ ಮಂಡಲಿ ಭೂಮಿಯಾದ್ಯಂತ ಇರುವ ಬ್ರಾಂಚ್ ಆಫೀಸ್‍ಗಳ ಉಸ್ತುವಾರಿ ಮಾಡುತ್ತದೆ. ಬೆತೆಲ್‍ನಲ್ಲಿ ಸೇವೆ ಮಾಡುತ್ತಿರುವವರನ್ನು ಬೆತೆಲ್ ಕುಟುಂಬದವರು ಎಂದು ಕರೆಯಲಾಗುತ್ತದೆ. ಅವರೆಲ್ಲರೂ ಬೇರೆಬೇರೆ ಹಿನ್ನೆಲೆಗಳಿಂದ ಬಂದಿರುವುದಾದರೂ ಒಂದೇ ಕುಟುಂಬದವರಂತೆ ಪ್ರೀತಿ ವಾತ್ಸಲ್ಯ ಐಕ್ಯತೆಯಿಂದ ಇರುತ್ತಾರೆ. ಒಗ್ಗಟ್ಟಿನಿಂದ ಕೆಲಸ ಮಾಡುತ್ತಾರೆ. ಊಟದ ವೇಳೆಯಲ್ಲಿ ಒಟ್ಟುಗೂಡಿ ಆನಂದಿಸುತ್ತಾರೆ. ಬೈಬಲ್ ವಿಷಯಗಳನ್ನು ಜೊತೆಗೂಡಿ ಕಲಿಯುತ್ತಾರೆ.—ಕೀರ್ತನೆ 133:1.

**ಬೆತೆಲ್ ಎನ್ನುವುದು ಅಪೂರ್ವ ಸ್ಥಳವಾಗಿದ್ದು ತ್ಯಾಗಮಯ ಜೀವನ ಎದ್ದುಕಾಣುತ್ತದೆ.** ಬೆತೆಲ್‍ನಲ್ಲಿ ಸೇವೆ ಮಾಡುವವರು ದೇವರ ಇಷ್ಟವನ್ನು ಮಾಡಲು ತಮ್ಮ ಬದುಕನ್ನೇ ಮುಡಿಪಾಗಿಟ್ಟಿದ್ದಾರೆ. (ಮತ್ತಾಯ 6:33) ಖರ್ಚಿಗಾಗಿ ಸ್ವಲ್ಪ ಹಣ ಕೊಡಲಾಗುತ್ತದೆ ವಿನಾ ಅವರಿಗೆ ಸಂಬಳವೆನ್ನುವುದು ಇರುವುದಿಲ್ಲ. ಆದರೆ ಊಟ ವಸತಿ ಮುಂತಾದ ಏರ್ಪಾಡು ಇದೆ. ಅವರಿಗೆ ನಾನಾ ಕೆಲಸಗಳನ್ನು ವಹಿಸಲಾಗುತ್ತದೆ. ಆಫೀಸ್, ಅಡುಗೆಮನೆ, ಉಪಹಾರ ಕೊಠಡಿ, ಮುದ್ರಣಾಲಯ, ಬಟ್ಟೆ ಒಗೆಯುವ ವಿಭಾಗ, ದುರಸ್ತಿ ಕಾರ್ಯ, ಶುಚಿಕಾರ್ಯ ಹೀಗೆ ಎಲ್ಲಾ ಕೆಲಸ ಸಮಾನವೆಂದು ಭಾವಿಸಿ ಮಾಡುತ್ತಾರೆ.

**ಸುವಾರ್ತೆ ಸಾರುವ ಕಾರ್ಯಚಟುವಟಿಕೆಯ ಕೇಂದ್ರಸ್ಥಾನ.** ಬೆತೆಲ್‍ನ ಮುಖ್ಯ ಗುರಿ ಬೈಬಲ್ ಸತ್ಯಗಳನ್ನು ಆದಷ್ಟು ಜನರಿಗೆ ಮುಟ್ಟಿಸುವುದು. ಉದಾಹರಣೆಗೆ ಈ ಕಿರುಹೊತ್ತಗೆಯನ್ನು ತೆಗೆದುಕೊಳ್ಳಿ. ಆಡಳಿತ ಮಂಡಲಿಯ ಮಾರ್ಗದರ್ಶನದಡಿಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ರಚಿಸಲಾದ ಇದನ್ನು ಭೂಮಿಯಾದ್ಯಂತ ಇರುವ ನೂರಾರು ಅನುವಾದಕರಿಗೆ ಕಂಪ್ಯೂಟರ್‌ಗಳ ಮೂಲಕ ರವಾನಿಸಲಾಯಿತು. ಆಯಾ ಭಾಷೆಗೆ ಅನುವಾದಗೊಂಡ ನಂತರ ಬೆತೆಲ್ ಮುದ್ರಣಾಲಯದಲ್ಲಿ ಅಚ್ಚಾಗಿ 1,10,000ಕ್ಕೂ ಹೆಚ್ಚು ಸಭೆಗಳಿಗೆ ಕಳುಹಿಸಲಾಯಿತು. ಈ ಕಾರ್ಯದಲ್ಲಿ ಹೆಜ್ಜೆ ಹೆಜ್ಜೆಗೂ ಬೆತೆಲ್ ಕುಟುಂಬದವರು ಆಸ್ಥೆ ವಹಿಸಿ ಸುವಾರ್ತೆ ಸಾರುವ ಅತೀ ತುರ್ತಿನ ಕೆಲಸಕ್ಕೆ ಬೆಂಬಲ ನೀಡಿದ್ದಾರೆ.
—ಮಾರ್ಕ 13:10.

- ಬೆತೆಲ್‍ನಲ್ಲಿ ಯಾರು ಸೇವೆ ಸಲ್ಲಿಸುತ್ತಾರೆ ಮತ್ತು ಅವರಿಗೆ ಯಾವ ಸೌಲಭ್ಯ ಒದಗಿಸಲಾಗುತ್ತದೆ?
- ಯಾವ ತುರ್ತಿನ ಕೆಲಸಕ್ಕೆ ಬೆತೆಲ್ ಬೆಂಬಲ ನೀಡುತ್ತದೆ?

# ಬ್ರಾಂಚ್ ಆಫೀಸ್‌ನಲ್ಲಿ ಏನೆಲ್ಲ ಕೆಲಸಕಾರ್ಯ ನಡೆಯುತ್ತದೆ?



ಸಾಲೊಮನ್ ದ್ವೀಪಗಳು

ಬೆತೆಲ್ ಕುಟುಂಬದ ಸದಸ್ಯರು ಬ್ರಾಂಚ್ ಆಫೀಸ್‌ನಲ್ಲಿ ಅನುವಾದ, ಮುದ್ರಣ, ಸಾಹಿತ್ಯ ರವಾನೆ, ಆಡಿಯೋ ವಿಡಿಯೋ ಮುಂತಾದ ನಾನಾ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಾರೆ. ಅವರು ಸಲ್ಲಿಸುವ ಸೇವೆ ಆ ಬ್ರಾಂಚ್ ಆಫೀಸ್‌ನ ವ್ಯಾಪ್ತಿಯಲ್ಲಿ ಜರುಗುವ ಸುವಾರ್ತೆ ಸಾರುವ ಕೆಲಸಕ್ಕೆ ಬೆಂಬಲ ನೀಡುತ್ತದೆ.

**ಬ್ರಾಂಚ್ ಕಮಿಟಿಯ ಉಸ್ತುವಾರಿ.** ಆಯಾ ಬ್ರಾಂಚ್ ಆಫೀಸ್‌ನ ಉಸ್ತುವಾರಿಯನ್ನು ಆಡಳಿತ ಮಂಡಲಿಯು ಬ್ರಾಂಚ್ ಕಮಿಟಿಗೆ ವಹಿಸುತ್ತದೆ. ಬ್ರಾಂಚ್ ಕಮಿಟಿಯಲ್ಲಿ ಮೂವರು ಅಥವಾ ಹೆಚ್ಚು ಸಮರ್ಥ ಹಿರಿಯರು ಇರುತ್ತಾರೆ. ಈ ಕಮಿಟಿ ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ದೇಶದಲ್ಲಿನ ಸುವಾರ್ತೆ ಸಾರುವ ಕೆಲಸದ ಪ್ರಗತಿ ಹಾಗೂ ಉದ್ಭವಿಸುವ ಸಮಸ್ಯೆಗಳ ಬಗ್ಗೆ ಆಡಳಿತ ಮಂಡಲಿಗೆ ಆಗಿಂದಾಗ್ಗೆ ವರದಿ ನೀಡುತ್ತದೆ. ಮುಂಬರುವ ಸಾಹಿತ್ಯ, ಸಭಾ ಕೂಟ ಹಾಗೂ ಸಮ್ಮೇಳನಗಳಲ್ಲಿ ಯಾವ ವಿಷಯಗಳನ್ನು ಒದಗಿಸಬೇಕೆಂದು ನಿರ್ಧರಿಸಲು ಆಡಳಿತ ಮಂಡಲಿಗೆ ಈ ವರದಿ ನೆರವಾಗುತ್ತದೆ. ಬ್ರಾಂಚ್‌ಗಳಿಗೆ ಭೇಟಿ ನೀಡಿ ಬ್ರಾಂಚ್ ಕಮಿಟಿಗಳಿಗೆ ಸಲಹೆಸೂಚನೆ ನೀಡಲು ಆಡಳಿತ ಮಂಡಲಿ ಪ್ರತಿನಿಧಿಗಳನ್ನು ಕಳುಹಿಸುತ್ತದೆ. (ಜ್ಞಾನೋಕ್ತಿ 11:14) ಮುಖ್ಯಕಾರ್ಯಾಲಯದ ಪ್ರತಿನಿಧಿ ಎಂದು ಕರೆಯಲಾಗುವ ಇವರು ಬ್ರಾಂಚ್ ವ್ಯಾಪ್ತಿಯಲ್ಲಿರುವ ಪ್ರಚಾರಕರ ಹುಮ್ಮಸ್ಸು ಹೆಚ್ಚಿಸುವ ವಿಶೇಷ ಕಾರ್ಯಕ್ರಮದಲ್ಲಿ ಭಾಷಣ ಸಹ ನೀಡುತ್ತಾರೆ.



ಕೆನಡ

**ಸಭೆಗಳಿಗೆ ನೆರವು.** ಬ್ರಾಂಚ್ ಆಫೀಸ್‌ನಲ್ಲಿರುವ ಜವಾಬ್ದಾರಿಯುತ ಸಹೋದರರು ಹೊಸ ಸಭೆಯ ಸ್ಥಾಪನೆಗೆ ಅನುಮತಿ ನೀಡುತ್ತಾರೆ. ಪಯನೀಯರರು, ಮಿಷನರಿಗಳು ಹಾಗೂ ಸರ್ಕಿಟ್ ಮೇಲ್ವಿಚಾರಕರ ಚಟುವಟಿಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನೆ ನೀಡುತ್ತಾರೆ. ಸಮ್ಮೇಳನ ಹಾಗೂ ಅಧಿವೇಶನಗಳನ್ನು ಏರ್ಪಡಿಸುತ್ತಾರೆ. ಹೊಸ ರಾಜ್ಯ ಸಭಾಗೃಹಗಳನ್ನು ಕಟ್ಟುವ ಕೆಲಸವನ್ನು ನೋಡಿಕೊಳ್ಳುತ್ತಾರೆ. ಸಮಯಕ್ಕೆ ಸರಿಯಾಗಿ ಸಭೆಗಳಿಗೆ ಸಾಹಿತ್ಯ ರವಾನೆ ಆಗುತ್ತಿದೆ ಎಂದು ಖಚಿತಪಡಿಸಿಕೊಳ್ಳುತ್ತಾರೆ. ಬ್ರಾಂಚ್ ಆಫೀಸ್‌ನಲ್ಲಿ ನಡೆಯುವ ಪ್ರತಿಯೊಂದು ಕಾರ್ಯವು ಸುವಾರ್ತೆ ಸಾರುವ ಕೆಲಸ ಸುಗಮವಾಗಿ ನಡೆಯಲು ನೆರವಾಗುತ್ತದೆ.—1 ಕೊರಿಂಥ 14:33, 40.

ದಕ್ಷಿಣ ಆಫ್ರಿಕ



- ಬ್ರಾಂಚ್ ಕಮಿಟಿಗಳು ಆಡಳಿತ ಮಂಡಲಿಗೆ ಯಾವೆಲ್ಲ ವಿಧದಲ್ಲಿ ನೆರವು ನೀಡುತ್ತವೆ?
- ಜವಾಬ್ದಾರಿಯುತ ಸಹೋದರರು ಯಾವೆಲ್ಲ ಕೆಲಸಕಾರ್ಯಗಳನ್ನು ನೋಡಿಕೊಳ್ಳುತ್ತಾರೆ?

### ಇನ್ನಷ್ಟು ತಿಳಿಯಲು . . .

ಬ್ರಾಂಚ್ ಆಫೀಸ್ ಅನ್ನು ನೋಡಲು ಸರ್ವರಿಗೂ ಸ್ವಾಗತವಿದೆ. ಅಲ್ಲಿ ನಡೆಯುವ ಕೆಲಸ ಕಾರ್ಯಗಳನ್ನು ಸೋಮವಾರದಿಂದ ಶುಕ್ರವಾರದ ವರೆಗೆ ಸಂದರ್ಶಕರಿಗೆ ತೋರಿಸುವ ಏರ್ಪಾಡಿದೆ. ನೀವೊಮ್ಮೆ ಭೇಟಿ ನೀಡುವಂತೆ ಆಮಂತ್ರಿಸುತ್ತೇವೆ. ಸಂದರ್ಶಿಸುವಾಗ ಸಭಾ ಕೂಟಗಳಿಗೆ ಧರಿಸುವಂಥ ರೀತಿಯ ಉಡುಪನ್ನು ಧರಿಸಿಕೊಳ್ಳಿ. ಬೆತೆಲ್ ಸಂದರ್ಶನ ದೇವರ ಮೇಲೆ ನೀವಿಟ್ಟಿರುವ ನಂಬಿಕೆಯನ್ನು ಪುಷ್ಟೀಕರಿಸುವುದರಲ್ಲಿ ಸಂದೇಹವಿಲ್ಲ.



23



ರೈಟಿಂಗ್ ಡಿಪಾರ್ಟ್‌ಮೆಂಟ್, ಅಮೆರಿಕ



ದಕ್ಷಿಣ ಕೊರಿಯ



ಅರ್ಮೇನಿಯ



ಬುರುಂಡಿ



ಶ್ರೀಲಂಕ

# ನಮ್ಮ ಸಾಹಿತ್ಯದ ರಚನೆ ಹಾಗೂ ಅನುವಾದವನ್ನು ಹೇಗೆ ಮಾಡಲಾಗುತ್ತದೆ?

"ಸಕಲ ಕುಲ ಜನಾಂಗ ಭಾಷೆ ಮತ್ತು ಪ್ರಜೆಗಳಿಗೂ" ಸುವಾರ್ತೆಯನ್ನು ತಿಳಿಸುವ ಸಲುವಾಗಿ ನಾವು ಸುಮಾರು 750 ಭಾಷೆಗಳಲ್ಲಿ ಸಾಹಿತ್ಯ ಪ್ರಕಟಿಸುತ್ತೇವೆ. (ಪ್ರಕಟನೆ 14:6) ಅತಿ ದೊಡ್ಡ ಸವಾಲಿನ ಈ ಕೆಲಸವನ್ನು ಸಾಧಿಸಲು ನಮ್ಮಿಂದ ಸಾಧ್ಯವಾಗಿದ್ದು ಹೇಗೆ? ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಬರಹಗಾರರ ಮತ್ತು ಸಿದ್ಧಮನಸ್ಸಿನ ಅನುವಾದಕರ ಗುಂಪು ಅವಿರತವಾಗಿ ದುಡಿಯುತ್ತಿದ್ದಾರೆ. ಇವರೆಲ್ಲರೂ ಯೆಹೋವನ ಸಾಕ್ಷಿಗಳು.

**ಲೇಖನಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಸಿದ್ಧಗೊಳಿಸಲಾಗುತ್ತದೆ.** ನಮ್ಮ ಕೇಂದ್ರ ಕಾರ್ಯಾಲಯದಲ್ಲಿ ರೈಟಿಂಗ್ ಡಿಪಾರ್ಟ್‌ಮೆಂಟ್ ಎಂಬ ವಿಭಾಗವಿದ್ದು ಆಡಳಿತ ಮಂಡಲಿಯ ಉಸ್ತುವಾರಿಯ ಕೆಳಗೆ ಕಾರ್ಯನಿರ್ವಹಿಸುತ್ತದೆ. ಈ ಡಿಪಾರ್ಟ್‌ಮೆಂಟ್ ನಮ್ಮ ಕೇಂದ್ರ ಕಾರ್ಯಾಲಯ ಹಾಗೂ ಕೆಲವು ಬ್ರಾಂಚ್ ಆಫೀಸುಗಳಲ್ಲಿರುವ ಲೇಖಕರಿಗೆ ಸಾಹಿತ್ಯ ರಚಿಸುವಂತೆ ನಿರ್ದೇಶನ ನೀಡಿ ಕಾರ್ಯಯೋಜನೆ ರೂಪಿಸುತ್ತದೆ. ನಮ್ಮಲ್ಲಿ ಪ್ರಪಂಚದ ನಾನಾ ಕಡೆಗಳ ಲೇಖಕರು ಇರುವುದರಿಂದ ವೈವಿಧ್ಯಮಯ ಸಂಸ್ಕೃತಿಗಳನ್ನು ಬಿಂಬಿಸುವಂಥ ಲೇಖನಗಳನ್ನು ಪ್ರಕಟಿಸಲು ಸಾಧ್ಯವಾಗುತ್ತದೆ. ಹೀಗೆ ಅಂತಾರಾಷ್ಟ್ರೀಯವಾಗಿ ಓದುಗರ ಮನಮುಟ್ಟಲು ಸಾಧ್ಯವಾಗಿದೆ.

**ಲೇಖನಗಳನ್ನು ಅನುವಾದಕರಿಗೆ ಕಳುಹಿಸಲಾಗುತ್ತದೆ.** ಲೇಖನಗಳನ್ನು ಬರೆದು ಪರಿಷ್ಕರಿಸಿ ಸಿದ್ಧಪಡಿಸಿದ ಮೇಲೆ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಅನುವಾದಕರ ತಂಡಗಳಿಗೆ ಕಳುಹಿಸಲಾಗುತ್ತದೆ. ಪ್ರಪಂಚದಾದ್ಯಂತವಿರುವ ಬೇರೆ ಬೇರೆ ಭಾಷೆಯ ಅನುವಾದಕರು ಅದನ್ನು ಭಾಷಾಂತರಿಸಿ, ತಿದ್ದಿ ಸಮಗ್ರ ರೂಪ ನೀಡುತ್ತಾರೆ. ಅವರು ಸರಿಯಾದ ಪದಗಳನ್ನು "ಹುಡುಕಿ ಆರಿಸಿ" ಇಂಗ್ಲಿಷ್ ಭಾಷೆಯ ಭಾವಾರ್ಥವನ್ನು ತಮ್ಮ ತಮ್ಮ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಲು ಶ್ರಮ ಹಾಕುತ್ತಾರೆ.—ಪ್ರಸಂಗಿ 12:10.

**ಕಂಪ್ಯೂಟರ್ ಕೆಲಸದ ವೇಗವನ್ನು ಹೆಚ್ಚಿಸುತ್ತದೆ.** ಲೇಖಕರ ಮತ್ತು ಅನುವಾದಕರ ಕೆಲಸವನ್ನು ಒಂದು ಕಂಪ್ಯೂಟರ್ ಮಾಡಸಾಧ್ಯವಿಲ್ಲ. ಆದರೆ ಗಣಕೀಕೃತ ಪದಕೋಶದಂಥ ಉಪಯುಕ್ತ ಕಂಪ್ಯೂಟರ್ ಸಾಧನ ಹಾಗೂ ಪ್ರೋಗ್ರಾಮ್‌ಗಳು ಕೆಲಸದ ವೇಗವನ್ನು ಹೆಚ್ಚಿಸಲು ನೆರವಾಗುತ್ತವೆ. ಯೆಹೋವನ ಸಾಕ್ಷಿಗಳೇ ಆವಿಷ್ಕರಿಸಿದ 'ಮಲ್ಟಿ ಎಲೆಕ್ಟ್ರಾನಿಕ್ ಪಬ್ಲಿಷಿಂಗ್ ಸಿಸ್ಟಮ್' (MEPS) ಎಂಬ ಪ್ರೋಗ್ರಾಮ್ ನೂರಾರು ಭಾಷೆಗಳ ಲಿಪಿಗಳನ್ನಲ್ಲದೆ ಚಿತ್ರಗಳ ಜೋಡಣೆಗೂ ಸಹಾಯಕಾರಿಯಾಗಿದ್ದು ಮುದ್ರಣ ತೀರ ಸುಲಭವಾಗಿದೆ.

ಕೇವಲ ಕೆಲವೇ ಸಾವಿರ ಮಂದಿ ಮಾತಾಡುವ ಭಾಷೆಯಲ್ಲಿಯೂ ನಮ್ಮ ಸಾಹಿತ್ಯ ಮುದ್ರಣಗೊಳ್ಳುತ್ತಿದೆ. ನಾವೇಕೆ ಇಷ್ಟೆಲ್ಲಾ ಪ್ರಯತ್ನ ಶ್ರಮ ಹಾಕುತ್ತೇವೆ? ಏಕೆಂದರೆ, "ಎಲ್ಲ ರೀತಿಯ ಜನರು ರಕ್ಷಣೆಯನ್ನು ಹೊಂದಬೇಕು ಮತ್ತು ಸತ್ಯದ ನಿಷ್ಕೃಷ್ಟ ಜ್ಞಾನವನ್ನು ಪಡೆದುಕೊಳ್ಳಬೇಕು" ಎನ್ನುವುದು ಯೆಹೋವ ದೇವರ ಇಷ್ಟವಾಗಿದೆ.
—1 ತಿಮೊಥೆಯ 2:3, 4.

- ನಮ್ಮ ಸಾಹಿತ್ಯವನ್ನು ಹೇಗೆ ಸಿದ್ಧಪಡಿಸಲಾಗುತ್ತದೆ?
- ನಮ್ಮ ಸಾಹಿತ್ಯವನ್ನು ನೂರಾರು ಭಾಷೆಗಳಿಗೆ ಅನುವಾದಿಸುವ ಉದ್ದೇಶವೇನು?



# ನಮ್ಮ ಲೋಕವ್ಯಾಪಕ ಕೆಲಸಕ್ಕೆ ಹಣಕಾಸು ಎಲ್ಲಿಂದ?



ನಮ್ಮ ಸಂಘಟನೆ ಪ್ರತಿವರ್ಷ ಕೋಟ್ಯಂತರ ಬೈಬಲ್‌ಗಳನ್ನು ಹಾಗೂ ಇತರ ಸಾಹಿತ್ಯ ವನ್ನು ಮುದ್ರಿಸಿ ಉಚಿತವಾಗಿ ವಿತರಿಸುತ್ತದೆ. ರಾಜ್ಯ ಸಭಾಗೃಹಗಳನ್ನು ಹಾಗೂ ಬ್ರಾಂಚ್ ಆಫೀಸ್‌ಗಳನ್ನು ನಿರ್ಮಿಸುತ್ತದೆ. ಸಾವಿರಾರು ಬೆತೆಲ್ ಸೇವಕರ ಹಾಗೂ ಮಿಷನರಿಗಳ ಖರ್ಚುವೆಚ್ಚಗಳನ್ನು ನೋಡಿಕೊಳ್ಳುತ್ತದೆ. ವಿಪತ್ತು ಪರಿಹಾರಕಾರ್ಯ ಕೈಗೊಳ್ಳುತ್ತದೆ. ಇದಕ್ಕೆಲ್ಲ ಹಣ ಎಲ್ಲಿಂದ ಬರುತ್ತೆ ಎಂದು ನೀವು ಯೋಚಿಸಬಹುದು.

**ಹಣ ವಸೂಲಿ ಮಾಡುವುದಿಲ್ಲ.** ಭೂವ್ಯಾಪಕವಾಗಿ ಸುವಾರ್ತೆ ಸಾರುವ ನಮ್ಮ ಕೆಲಸಕ್ಕೆ ತುಂಬ ಹಣ ಖರ್ಚಾಗುವುದಾದರೂ ನಾವು ಹಣ ವಸೂಲಿ ಮಾಡುವುದಿಲ್ಲ. ನಮ್ಮ ಕೆಲಸ ಕಾರ್ಯಗಳನ್ನು ಯೆಹೋವ ದೇವರು ಬೆಂಬಲಿಸುತ್ತಾನೆ, ನಾವು ಯಾವತ್ತೂ "ನೆರವಿಗಾಗಿ ಮಾನವರ ಮುಂದೆ ಕೈ ಚಾಚುವುದಿಲ್ಲ" ಎಂದು ನೂರು ವರ್ಷಗಳ ಹಿಂದೆಯೇ ಕಾವಲಿನಬುರುಜು ಪತ್ರಿಕೆಯ ಎರಡನೇ ಸಂಚಿಕೆ ತಿಳಿಸಿತು. ಅದು ಇವತ್ತಿಗೂ ನಿಜವಾಗಿದೆ.—ಮತ್ತಾಯ 10:8.



ನೇಪಾಳ

**ನಮ್ಮ ಕಾರ್ಯ ಸ್ವಯಂಪ್ರೇರಿತ ದೇಣಿಗೆಗಳಿಂದ ನಡೆಯುತ್ತದೆ.** ತುಂಬಾ ಜನರು ನಮ್ಮ ಬೈಬಲ್ ಶಿಕ್ಷಣ ಕಾರ್ಯವನ್ನು ಮೆಚ್ಚಿ ದೇಣಿಗೆ ನೀಡುತ್ತಾರೆ. ಯೆಹೋವನ ಸಾಕ್ಷಿಗಳು ಸಹ ತಮ್ಮ ಸಮಯ, ಶಕ್ತಿ-ಸಾಮರ್ಥ್ಯ, ಸಂಪನ್ಮೂಲಗಳನ್ನು ದೇವರ ಕೆಲಸಕ್ಕಾಗಿ ಧಾರೆ ಯೆರೆಯುತ್ತಾರೆ. (1 ಪೂರ್ವಕಾಲವೃತ್ತಾಂತ 29:9) ನಮ್ಮ ರಾಜ್ಯ ಸಭಾಗೃಹಗಳಲ್ಲಿ, ಸಮ್ಮೇಳನಗಳಲ್ಲಿ ಹಾಗೂ ಅಧಿವೇಶನಗಳಲ್ಲಿ ಕಾಣಿಕೆ ಪೆಟ್ಟಿಗೆಗಳನ್ನು ಇಡಲಾಗಿರುತ್ತದೆ. ಮನಸ್ಸಾರೆ ಕಾಣಿಕೆ ನೀಡಲು ಬಯಸುವವರು ಹಣವನ್ನು ಹಾಕಬಹುದು. jw.org ವೆಬ್‌ಸೈಟ್ ಮೂಲಕ ಸಹ ಕಾಣಿಕೆ ಹಾಕಬಹುದು. ಕಾಣಿಕೆ ಹಾಕುವ ಎಲ್ಲರೂ ಶ್ರೀಮಂತರಾಗಿರುವುದಿಲ್ಲ. ಹೆಚ್ಚಿನವರು ಯೇಸು ಉದಾಹರಿಸಿದ ವಿಧವೆಯಂತೆ ಇದ್ದಾರೆ. ಆಕೆ ತೀರಾ ಬಡವಳಾಗಿದ್ದರೂ ತನ್ನಲ್ಲಿದ್ದ ಎರಡು ಚಿಕ್ಕ ನಾಣ್ಯಗಳನ್ನು ದೇವಾಲ ಯದ ಕಾಣಿಕೆ ಪೆಟ್ಟಿಗೆಯಲ್ಲಿ ಹಾಕಿ ದೇವಭಕ್ತಿ ಮೆರೆದಳು. (ಲೂಕ 21:1-4) ನಮ್ಮ ಕೆಲ ಸಕ್ಕೆ ಆರ್ಥಿಕ ಬೆಂಬಲ ನೀಡಲಿಚ್ಛಿಸುವವರು ತಮ್ಮ "ಹೃದಯದಲ್ಲಿ ನಿರ್ಣಯಿಸಿಕೊಂಡಿ ರುವ ಪ್ರಕಾರ" ದೇಣಿಗೆ ನೀಡಬಹುದು.—1 ಕೊರಿಂಥ 16:2; 2 ಕೊರಿಂಥ 9:7.



ಟೋಗೊ

ಅನೇಕ ಜನರು ತಮ್ಮ "ಆದಾಯದಿಂದ" ಯೆಹೋವ ದೇವರನ್ನು ಸನ್ಮಾನಿಸಲು ಮುಂದೆ ಬರುತ್ತಾರೆ. ಯೆಹೋವ ದೇವರು ಅವರ ಹೃದಯಗಳನ್ನು ಪ್ರೇರಿಸಿ ಸುವಾರ್ತೆ ಸಾರುವ ಕೆಲಸ ನಿಲ್ಲದೆ ಮುಂದುವರಿಯುವಂತೆ ನೋಡಿಕೊಳ್ಳುತ್ತಾನೆ ಎಂಬ ಭರವಸೆ ನಮಗಿದೆ.—ಜ್ಞಾನೋಕ್ತಿ 3:9.

ಬ್ರಿಟನ್



- ಬೇರೆ ಧಾರ್ಮಿಕ ಸಂಸ್ಥೆಗಳಿಗಿಂತ ನಮ್ಮ ಸಂಘಟನೆ ಹೇಗೆ ಭಿನ್ನವಾಗಿದೆ?
- ದೇಣಿಗೆಗಳನ್ನು ಯಾವ ಕಾರ್ಯಗಳಿಗಾಗಿ ಬಳಸಲಾಗುತ್ತದೆ?

25

# ರಾಜ್ಯ ಸಭಾಗೃಹಗಳನ್ನು ಏಕೆ ಮತ್ತು ಹೇಗೆ ನಿರ್ಮಿಸಲಾಗುತ್ತದೆ?



ಬೊಲಿವಿಯ

ಬೈಬಲಿನಲ್ಲಿರುವ ಹಾಗೂ ಯೇಸು ಬೋಧಿಸಿದ ಮುಖ್ಯ ವಿಚಾರ ದೇವರ ರಾಜ್ಯ. ಅದೇ ವಿಚಾರವನ್ನು ನಮ್ಮ ಸಭಾಕೂಟಗಳಲ್ಲಿ ಬೋಧಿಸಲಾಗುತ್ತದೆ. ಹಾಗಾಗಿ ಆ ಸ್ಥಳಕ್ಕೆ ರಾಜ್ಯ ಸಭಾಗೃಹ ಎಂದು ಹೆಸರು.—ಲೂಕ 8:1.

**ರಾಜ್ಯ ಸಭಾಗೃಹ ಸತ್ಯಾರಾಧನೆಯ ಕೇಂದ್ರ.** ದೇವರ ರಾಜ್ಯದ ಬಗ್ಗೆ ಸುವಾರ್ತೆ ಸಾರುವ ಕಾರ್ಯ ಸಂಘಟನೆಗೊಳ್ಳುವುದು ರಾಜ್ಯ ಸಭಾಗೃಹದಲ್ಲಿ. (ಮತ್ತಾಯ 24:14) ರಾಜ್ಯ ಸಭಾಗೃಹಗಳು ಗಾತ್ರ ವಿನ್ಯಾಸದಲ್ಲಿ ವಿಭಿನ್ನವಾಗಿದ್ದು ಅನೇಕ ಪ್ರದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಸಭೆಗಳು ಆರಾಧನೆಗಾಗಿ ಬಳಸುತ್ತವೆ. ಸಭೆಗಳ ಸಂಖ್ಯೆ ದಿನೇ ದಿನೇ ಅಧಿಕವಾಗುತ್ತಿರುವ ಕಾರಣ ಇತ್ತೀಚಿನ ವರ್ಷಗಳಲ್ಲಿ ಸಾವಿರಾರು ರಾಜ್ಯ ಸಭಾಗೃಹಗಳನ್ನು ಕಟ್ಟಲಾಗಿದೆ. ದಿನವೊಂದಕ್ಕೆ ಸರಾಸರಿ ಐದು ರಾಜ್ಯ ಸಭಾಗೃಹಗಳು ನಿರ್ಮಾಣವಾಗುತ್ತಿವೆ! ಇಷ್ಟು ತ್ವರಿತಗತಿಯಲ್ಲಿ ನಿರ್ಮಾಣಕಾರ್ಯ ಸಾಧ್ಯವಾಗುತ್ತಿರುವುದು ಹೇಗೆ?—ಮತ್ತಾಯ 19:26.





ನೈಜೀರಿಯದ ಒಂದು ಸಭಾಗೃಹ ಮೊದಲು ಮತ್ತು ಈಗ

**ಕೇಂದ್ರೀಕೃತ ಹಣಕಾಸು ಯೋಜನೆ.** ಸಂಗ್ರಹವಾಗುವ ಕಾಣಿಕೆ ಹಣವನ್ನು ಸಭೆಗಳು ಬ್ರಾಂಚ್ ಆಫೀಸಿಗೆ ಕಳುಹಿಸುತ್ತವೆ. ಆ ಹಣವನ್ನು ಹೊಸ ರಾಜ್ಯ ಸಭಾಗೃಹ ಕಟ್ಟಲು ಅಥವಾ ಹಳೇ ಕಟ್ಟಡವನ್ನು ನವೀಕರಿಸಲು ಹಣಕಾಸಿನ ಅಗತ್ಯವಿರುವ ಸಭೆಗಳಿಗೆ ನೀಡಲು ಆಗುತ್ತದೆ.

**ಸ್ವಯಂಸೇವಕರಿಂದ ನಿರ್ಮಾಣ.** ಅನೇಕ ದೇಶಗಳಲ್ಲಿ ***ರಾಜ್ಯ ಸಭಾಗೃಹ ನಿರ್ಮಾಣಕರ ತಂಡಗಳು*** ಇರುತ್ತವೆ. ಈ ನಿರ್ಮಾಣ ತಂಡಗಳು ಒಂದು ರಾಜ್ಯ ಸಭಾಗೃಹ ನಿರ್ಮಾಣವಾದ ನಂತರ ಮತ್ತೊಂದರ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತವೆ. ಹೀಗೆ ಬೇರೆ ಬೇರೆ ಪ್ರದೇಶಗಳಲ್ಲಿ ನಿರ್ಮಾಣ ಕೆಲಸ ಮಾಡುತ್ತಾ ಅಲ್ಲಿನ ಯೆಹೋವನ ಸಾಕ್ಷಿಗಳಿಗೆ ತಮ್ಮ ರಾಜ್ಯ ಸಭಾಗೃಹವನ್ನು ಕಟ್ಟಲು ನೆರವಾಗುತ್ತವೆ. ಇನ್ನು ಕೆಲವು ದೇಶಗಳಲ್ಲಿ ನಿರ್ಮಾಣ ಕಾಮಗಾರಿಯ ಉಸ್ತುವಾರಿ ವಹಿಸುವಂತೆ ಅರ್ಹ ಸಾಕ್ಷಿಗಳನ್ನು ನೇಮಿಸಲಾಗುತ್ತದೆ. ನಿರ್ಮಾಣದ ಪ್ರತಿಯೊಂದು ಸ್ಥಳದಲ್ಲಿ ಕುಶಲಕರ್ಮಿಗಳು ಸ್ವಯಂಸೇವಕರಾಗಿ ದುಡಿಯುತ್ತಾರಾದರೂ ಬಹುಪಾಲು ಕೆಲಸವನ್ನು ಸ್ಥಳೀಯ ಸಭೆಯವರೇ ಸ್ವಯಂಸೇವಕರಾಗಿ ಮಾಡಿ ಮುಗಿಸುತ್ತಾರೆ. ಯೆಹೋವ ದೇವರ ಪವಿತ್ರಾತ್ಮ ಶಕ್ತಿಯ ಸಹಾಯದಿಂದ ಹಾಗೂ ಆತನ ಜನರ ಅವಿರತ ಶ್ರಮದಿಂದ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ಸಾಗಿ ಪೂರ್ಣಗೊಳ್ಳುತ್ತದೆ.—ಕೀರ್ತನೆ 127:1; ಕೊಲೊಸ್ಸೆ 3:23.

- ನಮ್ಮ ಆರಾಧನೆಯ ಸ್ಥಳಕ್ಕೆ ರಾಜ್ಯ ಸಭಾಗೃಹ ಎಂಬ ಹೆಸರಿರುವುದೇಕೆ?
- ಪ್ರಪಂಚದಾದ್ಯಂತ ತ್ವರಿತಗತಿಯಲ್ಲಿ ರಾಜ್ಯ ಸಭಾಗೃಹ ನಿರ್ಮಾಣ ಸಾಧ್ಯವಾಗುತ್ತಿರುವುದು ಹೇಗೆ?

ಟಹೀಟಿ



26

# ರಾಜ್ಯ ಸಭಾಗೃಹವನ್ನು ಸುಸ್ಥಿತಿಯಲ್ಲಿಡಲು ಹೇಗೆ ನೆರವಾಗುವಿರಿ?



ಎಸ್ಟೋನಿಯ

ಯೆಹೋವನ ಸಾಕ್ಷಿಗಳ ಪ್ರತಿಯೊಂದು ರಾಜ್ಯ ಸಭಾಗೃಹ ಯೆಹೋವ ದೇವರ ನಾಮವನ್ನು ಹೊತ್ತಿದೆ. ಆದ್ದರಿಂದ, ಆ ಕಟ್ಟಡವನ್ನು ಕಾಲಕಾಲಕ್ಕೆ ದುರಸ್ತಿ ಮಾಡಿ ಸದಾ ನೀಟಾಗಿ ಇಡುವುದು ನಮ್ಮ ಆರಾಧನೆಯ ಭಾಗ. ಶುಚಿಕಾರ್ಯ ಹಾಗೂ ದುರಸ್ತಿ ಕೆಲಸದಲ್ಲಿ ಎಲ್ಲರೂ ಕೈ ಜೋಡಿಸಬಹುದು.

**ಸಭಾ ಕೂಟದ ನಂತರ ಸ್ವಚ್ಛಗೊಳಿಸುವಿಕೆ.** ಪ್ರತಿ ಸಲ ಸಭಾ ಕೂಟ ಮುಗಿದ ನಂತರ ಸೋದರ ಸೋದರಿಯರು ರಾಜ್ಯ ಸಭಾಗೃಹವನ್ನು ಶುಚಿಗೊಳಿಸುತ್ತಾರೆ. ಅದಲ್ಲದೆ ವಾರಕ್ಕೊಮ್ಮೆ ಕೂಲಂಕಷವಾಗಿ ಶುಚಿಗೊಳಿಸಲಾಗುತ್ತದೆ. ಒಬ್ಬ ಸಭಾ ಹಿರಿಯ ಅಥವಾ ಶುಶ್ರೂಷಾ ಸೇವಕ ಶುಚಿಕಾರ್ಯಗಳ ಪಟ್ಟಿಮಾಡಿ ಮೇಲುಸ್ತುವಾರಿ ವಹಿಸುತ್ತಾರೆ. ನೆಲ ಗುಡಿಸುವುದು, ಒರೆಸುವುದು, ಧೂಳು ಜಾಡಿಸುವುದು, ಕುರ್ಚಿ ಜೋಡಿಸುವುದು, ಶೌಚಾಲಯಗಳನ್ನು ಶುಚಿಮಾಡಿ ರೋಗಾಣು ಮುಕ್ತಗೊಳಿಸುವುದು, ಕಿಟಕಿ ಬಾಗಿಲು ಕನ್ನಡಿಗಳನ್ನು ಒರೆಸುವುದು, ಕಸ ವಿಲೇವಾರಿ, ಅಂಗಳವನ್ನು ಶುಚಿ ಮಾಡುವುದು ಹೀಗೆ ನಾನಾ ಕೆಲಸಗಳನ್ನು ಸಭಾ ಸದಸ್ಯರು ಸ್ವಯಂ ಮುಂದೆ ಬಂದು ಮಾಡುತ್ತಾರೆ. ವರ್ಷಕ್ಕೊಮ್ಮೆ ಎಲ್ಲರೂ ಸೇರಿ ಹೆಚ್ಚುವರಿ ಶುಚಿಕಾರ್ಯದಲ್ಲಿ ಒಳಗೂಡುತ್ತಾರೆ. ನಮ್ಮ ಮಕ್ಕಳಿಗೂ ಚಿಕ್ಕಪುಟ್ಟ ಕೆಲಸ ವಹಿಸುತ್ತೇವೆ. ಹೀಗೆ ಅವರಲ್ಲಿ ಆರಾಧನಾ ಸ್ಥಳದ ಬಗ್ಗೆ ಗೌರವಭಾವ ಬೆಳೆಸುತ್ತೇವೆ.—ಪ್ರಸಂಗಿ 5:1.



ಜಿಂಬಾಬ್ವೆ

**ದುರಸ್ತಿ ಕಾರ್ಯ.** ವರ್ಷಕ್ಕೊಮ್ಮೆ ರಾಜ್ಯ ಸಭಾಗೃಹದ ಒಳಗೆ ಹೊರಗೆ ಪರೀಕ್ಷಿಸಲಾಗುತ್ತದೆ. ಕಟ್ಟಡವನ್ನು ಸುಸ್ಥಿತಿಯಲ್ಲಿಡಲು ನಿಯತವಾಗಿ ಏನೆಲ್ಲ ದುರಸ್ತಿ ಕಾರ್ಯವನ್ನು ಮಾಡಬೇಕೆಂದು ನಿರ್ಧರಿಸಲು ಇದು ನೆರವಾಗುತ್ತದೆ. ಹೀಗೆ ದೊಡ್ಡ ಪ್ರಮಾಣದ ದುರಸ್ತಿ ಖರ್ಚು ಬಾರದಂತೆ ನೋಡಿಕೊಳ್ಳಲಾಗುತ್ತದೆ. (2 ಪೂರ್ವಕಾಲವೃತ್ತಾಂತ 24:13; 34:11) ನೀಟಾಗಿ ಸುಸ್ಥಿತಿಯಲ್ಲಿರುವ ರಾಜ್ಯ ಸಭಾಗೃಹ ದೇವಾರಾಧನೆಗೆ ಹೇಳಿ ಮಾಡಿಸಿದ ಸ್ಥಳವಾಗಿದೆ. ದುರಸ್ತಿ ಮತ್ತು ಶುಚಿ ಕಾರ್ಯದಲ್ಲಿ ಕೈ ಜೋಡಿಸುವುದು ಯೆಹೋವ ದೇವರ ಮೇಲೆ ಮತ್ತು ಆತನ ಆರಾಧನೆಯ ಸ್ಥಳದ ಬಗ್ಗೆ ನಮಗೆ ಅತೀವ ಪ್ರೀತಿಯಿದೆ ಎಂದು ತೋರಿಸುತ್ತದೆ. (ಕೀರ್ತನೆ 122:1) ಮಾತ್ರವಲ್ಲ ನೆರೆಹೊರೆಯವರಲ್ಲಿ ಸತ್ಯಾರಾಧನೆಯ ಬಗ್ಗೆ ಗೌರವಭಾವ ಮೂಡಿಸುತ್ತದೆ.—2 ಕೊರಿಂಥ 6:3.

- ನಮ್ಮ ಆರಾಧನೆಯ ಸ್ಥಳವನ್ನು ನಾವು ಹೇಗೆ ವೀಕ್ಷಿಸಬೇಕು?
- ರಾಜ್ಯ ಸಭಾಗೃಹವನ್ನು ಶುಚಿಮಾಡಲು ಯಾವ ಏರ್ಪಾಡಿದೆ?



ಮಂಗೋಲಿಯ



ಪೋರ್ಟರಿಕೊ

27

# ರಾಜ್ಯ ಸಭಾಗೃಹ ಗ್ರಂಥಾಲಯದ ಅನುಕೂಲಗಳೇನು?



ಇಸ್ರೇಲ್



ಚೆಕ್ ಗಣರಾಜ್ಯ



ಬೆನಿನ್



ಕೇಮನ್ ದ್ವೀಪಗಳು

ಬೈಬಲ್‌ನಲ್ಲಿರುವ ವಿಷಯಗಳ ಬಗ್ಗೆ ಜ್ಞಾನ ಹೆಚ್ಚಿಸಿಕೊಳ್ಳಲು ಆಸೆಯೇ? ಬೈಬಲ್‌ನ ಯಾವುದಾದರೂ ಒಂದು ವಚನ, ಒಬ್ಬ ವ್ಯಕ್ತಿ ಅಥವಾ ಸ್ಥಳದ ಬಗ್ಗೆ ಹೆಚ್ಚು ವಿವರ ತಿಳಿದುಕೊಳ್ಳಬೇಕೇ? ಸಮಸ್ಯೆಯೊಂದನ್ನು ನಿಭಾಯಿಸಲು ಬೈಬಲ್‌ನಿಂದ ಸಲಹೆಸೂಚನೆ ಪಡೆಯಲು ಇಷ್ಟವಿದೆಯೇ? ಹಾಗಾದರೆ ನಮ್ಮ ರಾಜ್ಯ ಸಭಾಗೃಹ ಗ್ರಂಥಾಲಯ ನಿಮಗೆ ನೆರವಾಗುವುದು.

**ಸಂಶೋಧನೆಗೆ ಅನುಕೂಲ ಸಾಧನಗಳು.** ಯೆಹೋವನ ಸಾಕ್ಷಿಗಳ ಎಲ್ಲ ಸಾಹಿತ್ಯ ನಿಮ್ಮಲ್ಲಿ ಇಲ್ಲದಿರಬಹುದು. ಆದರೆ ರಾಜ್ಯ ಸಭಾಗೃಹದ ಗ್ರಂಥಾಲಯದಲ್ಲಿ ನಿಮ್ಮ ಭಾಷೆಯ ಇತ್ತೀಚಿನ ಪ್ರತಿಯೊಂದು ಸಾಹಿತ್ಯ ಲಭ್ಯವಿದೆ. ಅಲ್ಲದೆ ಬೈಬಲಿನ ವಿವಿಧ ಭಾಷಾಂತರಗಳು, ಪದಕೋಶಗಳು ಹಾಗೂ ಇನ್ನಿತರ ಉಪಯುಕ್ತ ಪುಸ್ತಕಗಳು ಅಲ್ಲಿವೆ. ಅವುಗಳನ್ನು ನೀವು ಸಭಾ ಕೂಟಗಳ ಮುನ್ನ ಅಥವಾ ನಂತರ ಉಪಯೋಗಿಸಬಹುದು. ಸಭಾಗೃಹದಲ್ಲಿ ಕಂಪ್ಯೂಟರ್ ಇರುವಲ್ಲಿ ವಾಚ್‌ಟವರ್ ಲೈಬ್ರರಿ ಎಂಬ ಪ್ರೋಗ್ರಾಮ್ ಅನ್ನು ಸಹ ನೀವು ಬಳಸಿಕೊಳ್ಳಬಹುದು. ಅದರಲ್ಲಿ ನಮ್ಮ ಸಾಹಿತ್ಯದ ಭಂಡಾರವೇ ಇದ್ದು ನಿಮಗೆ ಬೇಕಾದ ವಿಷಯ, ಪದ ಅಥವಾ ವಚನದ ಬಗ್ಗೆ ಸಂಶೋಧನೆ ಮಾಡುವುದು ಅತೀ ಸುಲಭ.

**ಜೀವನ ಮತ್ತು ಸೇವೆ ಕೂಟದ ವಿದ್ಯಾರ್ಥಿಗಳಿಗೆ ಉಪಯುಕ್ತ.** ನೀವು ನೇಮಕವನ್ನು ತಯಾರಿಸುವಾಗ ರಾಜ್ಯ ಸಭಾಗೃಹದಲ್ಲಿರುವ ಗ್ರಂಥಾಲಯದ ಪ್ರಯೋಜನ ಪಡೆದುಕೊಳ್ಳಬಹುದು. ಜೀವನ ಮತ್ತು ಸೇವೆ ಕೂಟದ ಮೇಲ್ವಿಚಾರಕರು ಗ್ರಂಥಾಲಯದ ಉಸ್ತುವಾರಿ ಮಾಡುತ್ತಾರೆ. ಪ್ರಕಟಗೊಳ್ಳುವ ಪ್ರತಿಯೊಂದು ಸಾಹಿತ್ಯ ಗ್ರಂಥಾಲಯಕ್ಕೆ ಸೇರ್ಪಡೆಯಾಗುತ್ತಿದೆ ಹಾಗೂ ಸುಸ್ಥಿತಿಯಲ್ಲಿ ಇಡಲಾಗಿದೆ ಎನ್ನುವುದನ್ನು ಅವರು ಖಚಿತಪಡಿಸಿಕೊಳ್ಳುತ್ತಾರೆ. ಬೇಕಾದ ಮಾಹಿತಿಯನ್ನು ಸಂಗ್ರಹಿಸುವುದು ಹೇಗೆಂದು ಅವರು ಇಲ್ಲವೇ ನಿಮ್ಮ ಬೈಬಲ್ ಟೀಚರ್ ನಿಮಗೆ ತೋರಿಸುವರು. ಗ್ರಂಥಾಲಯದ ಪುಸ್ತಕಗಳನ್ನು ರಾಜ್ಯ ಸಭಾಗೃಹದಿಂದ ತೆಗೆದುಕೊಂಡು ಹೋಗಲು ಅನುಮತಿಯಿಲ್ಲ. ಗ್ರಂಥಾಲಯದ ಪುಸ್ತಕಗಳಲ್ಲಿ ಬರೆಯುವುದಾಗಲಿ ಗುರುತು ಹಾಕುವುದಾಗಲಿ ಮಾಡದೆ ಜೋಪಾನವಾಗಿ ಬಳಸಬೇಕು.

“ದೈವಜ್ಞಾನವನ್ನು” ನಿಕ್ಷೇಪದಂತೆ ಹುಡುಕಬೇಕೆಂದು ಬೈಬಲ್ ತಿಳಿಸುತ್ತದೆ. (ಜ್ಞಾನೋಕ್ತಿ 2:1-5) ಆ ರೀತಿ ಹುಡುಕಲು ರಾಜ್ಯ ಸಭಾಗೃಹದ ಗ್ರಂಥಾಲಯ ನಿಮಗೆ ನೆರವಾಗುತ್ತದೆ.

- ರಾಜ್ಯ ಸಭಾಗೃಹ ಗ್ರಂಥಾಲಯದಲ್ಲಿ ಯಾವೆಲ್ಲ ಸೌಲಭ್ಯವಿದೆ?
- ಗ್ರಂಥಾಲಯವನ್ನು ಸದುಪಯೋಗಿಸಲು ನಿಮಗೆ ಯಾರು ನೆರವು ನೀಡುವರು?

**ಇನ್ನಷ್ಟು ತಿಳಿಯಲು . . .**

ಮನೆಯಲ್ಲಿಯೇ ನಿಮ್ಮ ಉಪಯೋಗಕ್ಕಾಗಿ ಪುಟ್ಟ ಗ್ರಂಥಾಲಯ ಮಾಡಿಕೊಳ್ಳಿ. ಸಭೆಯ ಸಾಹಿತ್ಯ ವಿಭಾಗದಲ್ಲಿ ಅನೇಕ ಪುಸ್ತಕಗಳು ಲಭ್ಯವಿರುತ್ತವೆ. ಅವುಗಳನ್ನು ಪಡೆಯಲು ನಿಮ್ಮ ಬೈಬಲ್ ಟೀಚರ್ ಬಳಿ ಮಾತಾಡಿ.

# 28

# ನಮ್ಮ ವೆಬ್‌ಸೈಟ್‌ನಲ್ಲಿ ಏನೇನಿದೆ?

ಯೇಸು ತನ್ನ ಅನುಯಾಯಿಗಳಿಗೆ ಹೀಗೆ ಹೇಳಿದನು, "ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ; ಆಗ ಅವರು ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಸ್ವರ್ಗದಲ್ಲಿರುವ ನಿಮ್ಮ ತಂದೆಗೆ ಮಹಿಮೆಯನ್ನು ಸಲ್ಲಿಸುವರು." (ಮತ್ತಾಯ 5:16) ಆ ನಿಟ್ಟಿನಲ್ಲಿ ನಾವು ನವನವೀನ ತಂತ್ರಜ್ಞಾನವನ್ನು ಸಹ ಉಪಯೋಗಿಸುತ್ತೇವೆ. ಇಂಟರ್‌ನೆಟ್ ಅದರಲ್ಲೊಂದು. **jw.org** ನಮ್ಮ ಅಧಿಕೃತ ವೆಬ್‌ಸೈಟ್. ಯೆಹೋವನ ಸಾಕ್ಷಿಗಳಾದ ನಮ್ಮ ನಂಬಿಕೆ, ಕಾರ್ಯಚಟುವಟಿಕೆ ಮುಂತಾದ ಅನೇಕ ಮಾಹಿತಿ ಅದರಲ್ಲಿ ಲಭ್ಯ. ನಮ್ಮ ವೆಬ್‌ಸೈಟ್‌ನ ವೈಶಿಷ್ಟ್ಯಗಳೇನು?

**ನಿಮ್ಮ ಪ್ರಶ್ನೆಗಳಿಗೆ ಬೈಬಲ್ ನೀಡುವ ಉತ್ತರ ಅದರಲ್ಲಿದೆ.** ಜನರ ಮನಸ್ಸನ್ನು ಸದಾ ಕಾಡುವ ಪ್ರಶ್ನೆಗಳಿಗೆ ಅಲ್ಲಿ ಸೂಕ್ತ ಉತ್ತರ ಸಿಗುತ್ತದೆ. ಉದಾಹರಣೆಗೆ, *ನಮ್ಮ ಕಷ್ಟಗಳಿಗೆ ಕೊನೆ ಇದೆಯಾ? ಮತ್ತು ಸತ್ತವರು ಮತ್ತೆ ಬದುಕಿ ಬರುತ್ತಾರಾ?* ಎಂಬ ಕರಪತ್ರ ನಮ್ಮ ವೆಬ್‌ಸೈಟ್‌ನಲ್ಲಿ 600ಕ್ಕೂ ಹೆಚ್ಚು ಭಾಷೆಗಳಲ್ಲಿ ಲಭ್ಯ. *ನೂತನ ಲೋಕ ಭಾಷಾಂತರ* ಬೈಬಲ್ ಸಹ 130ಕ್ಕಿಂತ ಹೆಚ್ಚು ಭಾಷೆಗಳಲ್ಲಿ ಲಭ್ಯ. ಅಲ್ಲದೆ ಬೈಬಲ್ ಕಲಿಕೆಗೆ ನೆರವಾಗುವ ಬಹಳ ಪುಸ್ತಕಗಳು ಅದರಲ್ಲಿವೆ. *ಬೈಬಲ್ ನಿಜವಾಗಿಯೂ ಏನನ್ನು ಬೋಧಿಸುತ್ತದೆ?* ಎಂಬ ಪುಸ್ತಕ ಅವುಗಳಲ್ಲಿ ಒಂದು. *ಕಾವಲಿನಬುರುಜು* ಮತ್ತು *ಎಚ್ಚರ!* ಪತ್ರಿಕೆಗಳ ಇತ್ತೀಚಿನ ಸಂಚಿಕೆಗಳೂ ಆ ಸೈಟ್‌ನಲ್ಲಿವೆ. ಇವನ್ನೆಲ್ಲ ನೀವು ವೆಬ್‌ಸೈಟ್‌ನಲ್ಲಿ ಓದಬಹುದು. ಆಡಿಯೋಗಳನ್ನು ಆಲಿಸಬಹುದು. ಬೇಕಿದ್ದಲ್ಲಿ ಅವುಗಳನ್ನು MP3, PDF ಅಥವಾ EPUB ಫಾರ್ಮ್ಯಾಟ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬೈಬಲ್ ವಿಷಯಗಳನ್ನು ತಿಳಿಯಲು ಇಚ್ಛಿಸುವ ಜನರಿಗೆ ಅವರ ಭಾಷೆಯಲ್ಲಿ ಕೆಲವೊಂದು ಮಾಹಿತಿಯನ್ನು ಮುದ್ರಿಸಿ ಕೊಡಬಹುದು. ಹಲವಾರು ಸನ್ನೆ ಭಾಷೆಗಳ ವಿಡಿಯೋ ಪ್ರಕಾಶನಗಳೂ ಲಭ್ಯ. ಬೈಬಲ್ ನಾಟಕಗಳು, ನಾಟಕ ರೂಪದ ಬೈಬಲ್ ವಾಚನಗಳು ಮತ್ತು ಇಂಪಾದ ಸಂಗೀತಗಳನ್ನು ಡೌನ್‌ಲೋಡ್ ಮಾಡಿಕೊಂಡು ಬಿಡುವಿನ ಸಮಯದಲ್ಲಿ ಸವಿಯಬಹುದು.

**ಯೆಹೋವನ ಸಾಕ್ಷಿಗಳಿಗೆ ಸಂಬಂಧಿಸಿದ ಸತ್ಯ ವರದಿಗಳು ಅದರಲ್ಲಿವೆ.** ನಾವು ಹಮ್ಮಿಕೊಂಡ ಕಾರ್ಯಕ್ರಮ, ಭೂವ್ಯಾಪಕವಾಗಿ ಸುವಾರ್ತೆ ಸಾರುವ ಕೆಲಸದ ಪ್ರಗತಿ, ವಿಪತ್ತಿನ ಸಂದರ್ಭದಲ್ಲಿ ಕೈಗೊಂಡ ಪರಿಹಾರ ಕಾರ್ಯ ಇತ್ಯಾದಿ ವರದಿಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ಓದಬಹುದು. ಮುಂದೆ ನಡೆಯಲಿರುವ ಅಧಿವೇಶನಗಳ ವಿವರ ಮತ್ತು ನಮ್ಮ ಬ್ರಾಂಚ್ ಆಫೀಸ್‌ಗಳ ವಿಳಾಸ ಸಹ ಅಲ್ಲಿದೆ.

ಹೀಗೆ ಭೂಮಿಯ ಮೂಲೆಮೂಲೆಗೂ ಸತ್ಯದ ಬೆಳಕನ್ನು ಪ್ರಕಾಶಿಸಲು ಸಾಧ್ಯವಾಗುತ್ತಿದೆ. ಭೂಪಟದ ಯಾವುದೋ ಮೂಲೆಯಲ್ಲಿರುವ ಅಂಟಾರ್ಟಿಕ್ ಖಂಡದ ಜನರು ಸಹ ನಮ್ಮ ವೆಬ್‌ಸೈಟ್‌ನ ಪ್ರಯೋಜನ ಪಡೆಯುತ್ತಿದ್ದಾರೆ. "ಯೆಹೋವನ ವಾಕ್ಯವು ತ್ವರಿತವಾಗಿ ಹಬ್ಬುತ್ತಾ" ಪ್ರಪಂಚದಾದ್ಯಂತ ಇರುವ ಎಲ್ಲ ಜನರಿಗೆ ತಿಳಿದು ಆತನ ನಾಮ ಮಹಿಮೆಗೊಳ್ಳಲಿ ಎನ್ನುವುದೇ ನಮ್ಮ ಪ್ರಾರ್ಥನೆ.—2 ಥೆಸಲೊನೀಕ 3:1.

- ಬೈಬಲ್ ಸತ್ಯವನ್ನು ಕಲಿಯಲು ಜನರಿಗೆ **jw.org** ವೆಬ್‌ಸೈಟ್ ಹೇಗೆ ನೆರವಾಗುತ್ತಿದೆ?
- ನಮ್ಮ ವೆಬ್‌ಸೈಟ್‌ನಲ್ಲಿ ಯಾವ ಮಾಹಿತಿಯನ್ನು ಜಾಲಾಡಲು ಇಷ್ಟಪಡುತ್ತೀರಿ?



ಫ್ರಾನ್ಸ್



ಪೋಲೆಂಡ್



ರಷ್ಯ

## ಎಚ್ಚರ ವಹಿಸಿ:

ನಮ್ಮ ಸಂಘಟನೆಯ ಬಗ್ಗೆ ಸುಳ್ಳುಸುಳ್ಳು ಮಾಹಿತಿಯನ್ನು ಹಬ್ಬಿಸಲೆಂದೇ ವಿರೋಧಿಗಳು ಕೆಲವು ಇಂಟರ್‌ನೆಟ್ ಸೈಟ್‌ಗಳನ್ನು ತೆರೆದಿದ್ದಾರೆ. ಅವರ ಉದ್ದೇಶ ಯೆಹೋವ ದೇವರಿಂದ ಜನರನ್ನು ದೂರ ಕೊಂಡೊಯ್ಯುವುದೇ. ಅಂಥ ವೆಬ್‌ಸೈಟ್‌ಗಳ ಬಗ್ಗೆ ನಾವು ಎಚ್ಚರ ವಹಿಸಬೇಕು.—ಕೀರ್ತನೆ 1:1; 26:4; ರೋಮನ್ನರಿಗೆ 16:17.

# ಯೆಹೋವ ದೇವರ ಇಷ್ಟವನ್ನು ಮಾಡುವಿರಾ?

ಈ ಕಿರುಹೊತ್ತಗೆಯನ್ನು ಓದಿದ್ದಕ್ಕಾಗಿ ಕೃತಜ್ಞತೆಗಳು. ಯೆಹೋವನ ಸಾಕ್ಷಿಗಳಾದ ನಮ್ಮ ಬಗ್ಗೆ ಹಾಗೂ ನಮ್ಮ ಸಂಘಟನೆಯ ಕಾರ್ಯವೈಖರಿಯ ಬಗ್ಗೆ ತಿಳಿದುಕೊಳ್ಳಲು ಇದು ಖಂಡಿತ ನಿಮಗೆ ನೆರವಾಗಿರುತ್ತೆ. ಮಾತ್ರವಲ್ಲ ಯೆಹೋವ ದೇವರ ಇಷ್ಟವನ್ನು ಇಂದು ಯಾರು ಮಾಡುತ್ತಿದ್ದಾರೆ ಎಂದು ಕಂಡುಹಿಡಿಯಲು ಇದು ನಿಮಗೆ ಸಹಾಯಮಾಡಿದೆ ಎಂದು ನಂಬುತ್ತೇವೆ. ದೇವರ ಬಗ್ಗೆ ಜ್ಞಾನ ಪಡೆದುಕೊಳ್ಳುವುದನ್ನು ಮುಂದುವರಿಸುವಂತೆ, ಆ ಜ್ಞಾನವನ್ನು ಬಂಧುಮಿತ್ರರೊಂದಿಗೆ ಹಂಚಿಕೊಳ್ಳುವಂತೆ, ನಮ್ಮ ಸಭಾ ಕೂಟಗಳಿಗೆ ಹಾಜರಾಗುವಂತೆ ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. —ಇಬ್ರಿಯ 10:23-25.

ಯೆಹೋವ ದೇವರ ಬಗ್ಗೆ ತಿಳಿದುಕೊಳ್ಳುತ್ತಾ ಹೋದಂತೆ ಆತ ನಿಮ್ಮನ್ನೆಷ್ಟು ಪ್ರೀತಿಸುತ್ತಾನೆ ಎನ್ನುವುದು ನಿಮಗೆ ಅರಿವಾಗುತ್ತದೆ. ಪ್ರತಿಯಾಗಿ ನೀವು ಕೂಡ ಆತನನ್ನು ಪ್ರೀತಿಸಲು ತೊಡಗುವಿರಿ. (1 ಯೋಹಾನ 4:8-10, 19) ಯೆಹೋವ ದೇವರನ್ನು ಪ್ರೀತಿಸುತ್ತೀರೆಂದು ಹೇಗೆ ತೋರಿಸುವಿರಿ? ಆತನು ಇಟ್ಟಿರುವ ನೈತಿಕ ಮಟ್ಟಗಳನ್ನು ಪಾಲಿಸುವುದರ ಒಳಿತೇನು? ದೇವರ ಇಷ್ಟವನ್ನು ಮಾಡಲು ಯಾವುದು ನೆರವಾಗುವುದು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಸಹಾಯ ಮಾಡುವಂತೆ ನಿಮ್ಮ ಬೈಬಲ್ ಟೀಚರನ್ನು ವಿನಂತಿಸಿ. ಖಂಡಿತ ನೀವು, ನಿಮ್ಮ ಪರಿವಾರ “ನಿತ್ಯಜೀವವನ್ನು ದೃಷ್ಟಿಯಲ್ಲಿಟ್ಟವರಾಗಿ, . . . ದೇವರ ಪ್ರೀತಿಯಲ್ಲಿ” ಉಳಿಯುವಿರಿ. —ಯೂದ 21.

ಸತ್ಯ ಮಾರ್ಗದಲ್ಲಿ ಮುಂದುವರಿಯಲು ಈ ಕೆಳಗಿನ ಪುಸ್ತಕವನ್ನು ಅಧ್ಯಯನ ಮಾಡಿ.







JW.ORG™

jl-KA
161129